
# ಬೃಂದಾವನ ತತ್ತ್ವ

## ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನದಲ್ಲಿ ದೇವತಾ ಸನ್ನಿಧಿಯ ವಿವರಗಳು



ರಚನೆ : ಕೆ. ಅಪ್ಪಣ್ಣಾಚಾರ್ಯ

# ಬೃಂದಾವನ ತತ್ತ್ವ

**ಅನುಸಂಧಾನ**

"ಕಂಡ ಕಂಡಲ್ಲಿ ವಿಶ್ವರೂಪ ಕಾಂಬುವರೋ", ಕಣ್ಣುಗಳಿರುವುದು ನೋಡಲಿಕ್ಕಾಗಿ, ಜ್ಞಾನಿಯು ಸಹ ನೋಡುತ್ತಾನೆ. ವಸ್ತುವನ್ನು ಮಾತ್ರ ನೋಡುವುದಿಲ್ಲ. ವಸ್ತುವಿನೊಟ್ಟಿಗೆ ವಸ್ತುವಿಗೆ ಸತ್ತಾಪ್ರದನಾದ ಶ್ರೀವಿಷ್ಣುವನ್ನೂ ಕಾಣುತ್ತಾನೆ. ಶ್ರೀಹರಿ ಎಲ್ಲೆಲ್ಲಿ ನೋಡಲಲ್ಲಲ್ಲೆ ಇರುತಿಪ್ಪ. ಜ್ಞಾನಿ ತಾನು ನೋಡುವ ಎಲ್ಲಾ ಪದಾರ್ಥಗಳಲ್ಲೂ, ಮಾಡುವ ಎಲ್ಲಾ ಕೆಲಸಗಳಲ್ಲೂ, ಆಡುವ, ಕೇಳುವ ಎಲ್ಲಾ ಶಬ್ದಗಳಲ್ಲೂ ಪರಬ್ರಹ್ಮನನ್ನು ಕಾಣುವನು. ತಾನು ಕಂಡ ಪದಾರ್ಥಗಳನ್ನು ಪೂಜಾಸಾಮಗ್ರಿಗಳನ್ನಾಗಿ, ಮಾಡುವ ಕೆಲಸವನ್ನು ಶ್ರೀಹರಿಸೇವೆಯನ್ನಾಗಿ, ಶಬ್ದಗಳನ್ನು ಮಂತ್ರಗಳನ್ನಾಗಿ ಭಾವಿಸಿ ಮೋದಿಸುವನು. ಇದು ಭಾರತೀಯರ ಆಧ್ಯಾತ್ಮಜೀವನದ ಸರಣಿ.

**"ಬಾಂದಳವೆ ಮೊದಲಾದುದರೊಳೊಂ–**
**ದೊಂದರಲಿ ಪೂಜಾಸುಸುಧಾನ–**
**ವೆಂದೆನಿಸುವ ಪದಾರ್ಥಗಳು ಬಗೆ ಬಗೆಯ ನೂತನದಿ**
**ಸಂದಣಿಸಿಕೊಂಡಿಹವು...."**
**"ಸರ್ವ ಮಾತುಗಳೆಲ್ಲ ಮಂತ್ರವು – ಸರ್ವಕೆಲಸಗಳೆಲ್ಲ ಪೂಜೆಯು**

**"ಆವನಾದರೂ ಹಳಿಯಲಿ ಉಗುಳಲಿ**
**ಥೂ ಎನ್ನಲಿ ಛೀ ಎನ್ನಲಿ**
**ಇವು ಭಗವನ್ನಾಮಕಾಣೋ"**
ಇವು ಹರಿದಾಸರ ಸುವಾಕ್ಯಗಳು.

ಹರಿದಾಸರು ಕೇವಲ ಅನುಸಂಧಾನದ ಉಪದೇಶಕರಲ್ಲ. ತಾವು ಮೊದಲು ಮಾಡಿ, ಮಾಡಲು ಹೇಳುವವರು.

ವಿಜಯದಾಸರಿಗೆ ಅನೇಕ ಶಿಷ್ಯರು. ಎಲ್ಲರೂ ವಿಜಯದಾಸರ ಪ್ರತಿಬಿಂಬಗಳು. ವಿಜಯಪ್ರಭುಗಳು ಇಹಲೋಕದ ಯಾತ್ರೆಯನ್ನು ಮುಗಿಸಿದರು. ಆತ್ಮೀಯರೂ ಉದ್ಧಾರಕರೂ ಆದ ಗುರುಗಳ ವಿಯೋಗ, ನಿಜವಾಗಿ ದುಃಖಿಸಬೇಕಾದ ಸಮಯ. ಯಾವ ಶಿಷ್ಯರಿಗೂ ಭಗವಂತನ ವಿಸ್ಮೃತಿ ಬರಲಿಲ್ಲ. ಶಿಷ್ಯರೆಲ್ಲರೂ ತಮ್ಮ ಗುರುಗಳ ಪವಿತ್ರದೇಹವನ್ನು ಹವಿಸ್ಸನ್ನಾಗಿ ಚಿಂತಿಸಿದರು. ಕ್ರವ್ಯಾದನಾಮಕಅಗ್ನಿಯಲ್ಲಿರುವ ಪರಶುರಾಮನಿಗೆ ಅದನ್ನು ಸಮರ್ಪಿಸಿ ನಿರ್ಲಿಪ್ತರಾದರು.

Rarest Archiver

**"ಅಗ್ನ್ಯಂತರ್ಗತಪರಶುರಾಮ – ಪಗ್ಣಾ ನಿನ್ನೊಳು ಸೇರಿದನು ಹರಿಯೇ ॥**
**ಶಿರಿವಿಜಯ ದಾಸರೆಂಬ ಈ ಶರೀರವು**
**ಪರಮಪವಿತ್ರವಿದು ಕೇಳೋ ಸ್ವಾಮಿ!**
**ಧರೆಯೊಳಗೆ ಆವಲ್ಲಿ ಅರಸಿನೋಡಿದರಿಲ್ಲ**
**ವರಸಾರಹವಿಸ್ಸು ಅರ್ಪಿತವು ನಿನಗೆ ॥**

ಹರಿದಾಸರ ಅನುಸಂಧಾನಕ್ಕೆ ಇದು ಮಹೋನ್ನತ ನಿದರ್ಶನ. ಪ್ರತಿಮಾನವನು ತನ್ನನ್ನೂ, ತನ್ನ ಸುತ್ತಲಿರುವ ಪರಿಸರವನ್ನೂ ಎರಡುವಿಷಯಗಳಲ್ಲಿ ಪೂರ್ಣವಾಗಿ ಮರೆಯುತ್ತಾನೆ. ಮೊದಲನೆಯದು ಭಗವಂತನ ಅನುಭೂತಿ. ಎರಡನೆಯದು ಕ್ಷಣಿಕವಾದ ಲೈಂಗಿಕವ್ಯಾಪಾರ. ಮಾನವನನ್ನು ಪಶುವನ್ನಾಗಿಸುವ, ಈ ಲೈಂಗಿಕ ವ್ಯಾಪಾರವನ್ನು ಸಹ, ಯಜ್ಞವನ್ನಾಗಿ ಭಾವಿಸಬೇಕೆಂದು ತಿಳಿಯ ಹೇಳಿದ ಸಂಸ್ಕೃತಿ ಭಾರತೀಯರದು. ಛಾಂದೋಗ್ಯಪನಿಷತ್ತು ಈ ಮಹಾಯಜ್ಞದ ಬಗ್ಗೆ ತನ್ನ ಬೆಳಕನ್ನು ಚೆಲ್ಲಿದೆ. ಈ ಬೆಳಕನ್ನು ಹರಿದಾಸರು ಕನ್ನಡ ಪ್ರಣತಿಗಳಲ್ಲಿ ತಂದು ಎಲ್ಲರ ಮನಗಳನ್ನು ಬೆಳಗಿದರು.

**ಮತ್ತೆ ಯೋಷಾಗ್ನಿಯಲಿ ತಿಳಿವುದು–**
**ಪಸ್ಥತತ್ತ್ವವೆ ಸಮಿಧೆ ಕಾಮೋ–**
**ತ್ಪತ್ತಿಪರ ಮಾತುಗಳೆ ಧೂಮವು ಯೋನಿ ಮಹದರ್ಚಿ ॥**
**ತತ್ಪ್ರವೇಶಾಂಗಾರ ಕಿಡಿಗಳು**
**ಉತ್ಸಹಗಳುತ್ಸರ್ಜನವೆ ಪುರು–**
**ಷೋತ್ತಮನಿಗವದಾನವೆನೆ ಕೈಕೊಂಡು ಮನ್ನಿಸುವ ॥**

ಶೌಚವಿಧಿಯಿಂದ ಹಿಡಿದು ರಾತ್ರಿ ಮಲಗುವವರೆಗೆ ಮಾಡುವ ಎಲ್ಲಾ ಕಾರ್ಯಗಳಲ್ಲಿ ಭಗವಂತನ ಸ್ಮರಣೆ ವಿಹಿತವಾಗಿದೆ. ಇದರ ತಿಳುವಳಿಕೆಗಾಗಿಯೇ ಆಚಾರ್ಯಮಧ್ವರು ಸದಾಚಾರಗ್ರಂಥವನ್ನು ಬರೆದಿರುವರು. ಭಗವಂತನು ಕರ್ಮಗಳಲ್ಲಿ ವ್ಯಾಪ್ತನಾಗಿರುವನು. ತಾನೇ ಮಾಡಿ ಮಾಡಿಸುವನು. ಆ ಆ ಕರ್ಮಗಳಲ್ಲಿ ಸ್ಮರಣೀಯನೂ ಆಗಿರುವನು. ಭಗವತ್ಸ್ಮರಣೆ ಇಲ್ಲದೆ ಮಾಡಿದ ಕರ್ಮಗಳು ಕೇವಲ ಕರ್ಮಗಳಾಗುವವು. ಕೆಲವೊಮ್ಮೆ ಬಂಧಕಗಳೂ ಆಗುವುವು. ತನುವದಂಡಿಸಿ ಮಾಡಿದ ಸಾಧನೆಗಳಾಗುವವು. ಭಗವತ್ಸ್ಮರಣೆಯಿಂದ ಮಾಡಿದ ಕರ್ಮಗಳು ತಾರಕಗಳಾಗಿ, ಸುಯಜ್ಞಗಳೆನಿಸುವವು. ಇದನ್ನು ತಿಳಿಸುವುದಕ್ಕಾಗಿಯೇ ಆಚಾರ್ಯರು ತಮ್ಮ ದ್ವಾದಶ ಸ್ತೋತ್ರದಲ್ಲಿ –

**"ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ**
**ಹರಿಪಾದವಿನಮ್ರಧಿಯಾ ಸತತಮ್"** ಎಂದು ಹೇಳಿರುವರು.

Rarest Archiver

"ಶಾಸ್ತ್ರವಿಹಿತವಾದ, ನೀನು ಮಾಡಲೇಬೇಕಾದ ಕರ್ಮವನ್ನು ಮಾಡು. (Do your duty). ನಾನು ಮಾಡುವ ಈ ಕರ್ಮದಲ್ಲಿ ಹರಿ ಇದ್ದಾನೆ. ಅವನೇ ಮಾಡಿಸುತ್ತಿದ್ದಾನೆ. ಅವನನ್ನು ಸ್ಮರಿಸುತ್ತಾ, ಅವನ ಪ್ರೀತಿಗಾಗಿ ಮಾಡುತ್ತಿದ್ದೇನೆ ಎಂದು ಹರಿಪಾದಪದ್ಮಗಳನ್ನು ವಿನಮ್ರ ಬುದ್ಧಿಯಿಂದ ನೆನೆಯುತ್ತಾ ಮಾಡು. ನಿನಗೆ ನೀ ಮಾಡಿದ ಕರ್ಮ ಬಂಧಕವಾಗುವುದಿಲ್ಲ, ತಾರಕವಾಗುತ್ತದೆ."

ಆಚಾರ್ಯರು ನಡೆದ ಹೆದ್ದಾರಿಯಲ್ಲೆ ಎಲ್ಲ ಜ್ಞಾನಿಗಳು ನಡೆದರು. ಅನುಸಂಧಾನಪದ್ಧತಿಯನ್ನು ಆಚರಣೆಯಲ್ಲಿ ಇಟ್ಟುಕೊಂಡರು. ಎಲ್ಲರಿಗೂ ಮಾರ್ಗದರ್ಶಕರಾಗಿ ಬಾಳಿದರು. ಉಪದೇಶಗುರುಗಳಾಗಿ ಬೆಳಗಿದರು. ಇವರು ನಮ್ಮಿಂದ ಕಣ್ಮರೆಯಾದ ಮೇಲೂ, ತಮ್ಮ ಸ್ಮಾರಕಗಳಿಂದ ಅನುಸಂಧಾನಪದ್ಧತಿಯನ್ನು ಇಂದಿಗೂ ತಿಳಿಸುತ್ತಿರುವರು.

ಇವರಲ್ಲಿ ವ್ಯಾಸರಾಜರು ಮೊದಲಿಗರು. ಇವರು ಭಗವಂತನ ಅನೇಕ ರೂಪಗಳ ಕೆತ್ತನೆಯಿಂದ ಕೂಡಿದ ಬೃಂದಾವನವನ್ನು ಮಾಡಿಸಿದರು. ಶುಭಮುಹೂರ್ತದಲ್ಲಿ ಬೃಂದಾವನದ ಅಡಿಯಲ್ಲಿ ಕುಳಿತರು. ಸಮಾಜದಿಂದ ಕಣ್ಮರೆಯಾದರು. "ಇದು ನಮ್ಮ ಸಮಾಧಿಯಲ್ಲ; ಭಗವಂತನ ಆವಾಸಮಂದಿರ; ಅವನ ನಿತ್ಯಸನ್ನಿಧಾನದಿಂದೊಪ್ಪುವ ಪೀಠ. ಈ ದೃಷ್ಟಿಯಿಂದ ಬೃಂದಾವನವನ್ನು ನೋಡಿ ಆನಂದಿಸಿರಿ. ಹರಿಯ ಅನುಗ್ರಹಕ್ಕೆ ಪಾತ್ರರಾಗಿರಿ" ಎಂದು ತಮ್ಮ ಬೃಂದಾವನದ ದ್ವಾರಾ ಸಂದೇಶವಿತ್ತರು.

ಭಾವೀಸಮೀರರೆನಿಸಿದ ವಾದಿರಾಜರ ಪಂಚಬೃಂದಾವನಗಳು ದಿವ್ಯಜ್ಞಾನ ಬೋಧಕಗಳಾಗಿವೆ. ದಶಾವತಾರಗಳಿಂದಲೂ, ರಾಮ–ಕೃಷ್ಣ–ವೇದವ್ಯಾಸ–ಹಯಗ್ರೀವ ರೂಪಗಳಿಂದಲೂ ಕೂಡಿಕೊಂಡು, ಪಂಚರೂಪಾತ್ಮಕನಿಗೆ ಸಿಂಹಾಸನಗಳಾಗಿರುವವು. ವಾದಿರಾಜರ ಅನುಸಂಧಾನದ ವಿರಾಡ್ರೂಪವನ್ನು ತೋರಿಸುತ್ತಿರುವವು.

ಈ ಮಹಿತಾತ್ಮರೇ ಗುರುರಾಘವೇಂದ್ರರಿಗೆ ಸ್ಫೂರ್ತಿಮೂರ್ತಿಗಳು. ಗುರುರಾಜರು ಸಹ ಬೃಂದಾವನವನ್ನು ತಾವೇ ನಿರ್ಮಾಣ ಮಾಡಿಸಿದ ಗುರುರಾಜರ ಬೃಂದಾವನಶಿಲೆ, ತ್ರೇತೆಯಲ್ಲಿ ರಾಮ ವಿಶ್ರಾಂತಿಗಾಗಿ ಕುಳಿತ ಶಿಲೆ. ಅಂದೇ ಅದು ಶ್ರೀರಾಮನಿಗೆ ಪೀಠವಾಯಿತು. ಅಪರೋಕ್ಷೀಕೃತಶ್ರೀಶರಾದ ಗುರುರಾಜರು ಇದನ್ನು ಗುರುತಿಸಿದರು. ಆ ಶಿಲೆಯನ್ನು ಅಪೂರ್ವಸಂದೇಶವನ್ನು ನೀಡುವ ಬೃಂದಾವನವನ್ನಾಗಿ ಮಾಡಿಸಿದರು.

## ಬೃಂದಾವನವೋ! ಹರಿಮಂದಿರವೋ!

ಗುರುರಾಜರು 713 ಶಾಲಗ್ರಾಮಗಳನ್ನು ಸ್ವತಃ ತಾವೇ ಪೂಜಿಸಿ, ಎರಡು ಸಂಪುಷ್ಟಗಳಲ್ಲಿ ಅವನ್ನಿರಿಸಿ, ಬೃಂದಾವನ ಮಧ್ಯದಲ್ಲಿ ಸ್ಥಾಪಿಸಿದರೆಂಬುದು ಚರಿತ್ರೆಗೆ

Rarest Archiver

ನಿಲುಕುತ್ತಿರುವ ವಿಷಯ. ಶಾಲಗ್ರಾಮಗಳ ಸಂಖ್ಯಾವಿಷಯದಲ್ಲಿ 713ಕ್ಕೆ ಬದಲಾಗಿ 700 ಎನ್ನುವುದು ಮತ್ತೊಂದು ಹೇಳಿಕೆ. ಗುರುರಾಜರ ಬೃಂದಾವನದಲ್ಲಿ ಪ್ರಧಾನವಾಗಿ 2 ಭಾಗಗಳಿವೆ. ಕೂರ್ಮಾಸನದಿಂದ ಹಿಡಿದು ವಸ್ತ್ರಉಡಿಸುವವರೆಗೆ ಇರುವ ಭಾಗ ಒಂದನೆಯದಾದರೆ, ಅದರ ಮೇಲಿರುವುದು ಎರಡನೆಯ ಭಾಗ. ವಸ್ತ್ರಉಡಿಸುವ ಕೆಳಗಿನ ಭಾಗದಲ್ಲಿ 8 ಉಪವಿಭಾಗಗಳಿವೆ. ಇದರ ಮೇಲೆ ಸುತ್ತಲೂ ಒಂದೊಂದು ದಿಕ್ಕಿಗೆ ಮೂರರಂತೆ ನಾಲ್ಕು ದಿಕ್ಕಿಗೆ ಸೇರಿ ಹನ್ನೆರಡು ಗೂಡುಗಳಿವೆ. ಅಡ್ಡಪಟ್ಟಿಗಳು ಒಂದೊಂದು ದಿಕ್ಕಿಗೆ 4ರಂತೆ ನಾಲ್ಕುದಿಕ್ಕಿಗೆ ಸೇರಿ (4x4=16) ಹದಿನಾರು. ಇದರಂತೆ ಉದ್ದಪಟ್ಟಿಗಳು ಸಹ ಹದಿನಾರು. ಬೃಂದಾವನದ ಮೇಲ್ಭಾಗದಲ್ಲಿ ಒಂದು ದಿಕ್ಕಿಗೆ 6ರಂತೆ ನಾಲ್ಕು ದಿಕ್ಕುಗಳಿಗೆ ಸೇರಿದಂತೆ ಇಪ್ಪತ್ತು ನಾಲ್ಕು ತೆನೆಗಳು (ಕಮಾನುಗಳು 6x4=24) ಇವೆ. ಕಣ್ಣು ನಾಮಗಳನ್ನು ಹಚ್ಚುವ ಮಧ್ಯಭಾಗದ ಫಲಕಗಳು ನಾಲ್ಕುದಿಕ್ಕುಗಳಿಗೆ ಸೇರಿ ನಾಲ್ಕು ಇವೆ. ಮಧ್ಯದ ಅಡ್ಡಪಟ್ಟಿಯಲ್ಲಿ ದಿಕ್ಕಿಗೆ 8 ಕಮಲಗಳಂತೆ ನಾಲ್ಕು ದಿಕ್ಕುಗಳಿಗೆ ಸೇರಿ (8x4=32) 32 ಕಮಲಗಳಿವೆ.

| | |
|---|---|
| ವಸ್ತ್ರ ಉಡಿಸುವ ಭಾಗದಲ್ಲಿರುವ ಉಪಭಾಗಗಳು | 8 |
| ಮೇಲ್ಭಾಗದಲ್ಲಿರುವ ಗೂಡುಗಳು | 12 |
| ಅಡ್ಡಪಟ್ಟಿಗಳು | 16 |
| ಉದ್ದಪಟ್ಟಿಗಳು | 16 |
| ತೆನೆಗಳು | 24 |
| ಫಲಕಗಳು | 4 |
| ಅಡ್ಡಪಟ್ಟಿಯಲ್ಲಿರುವ ಕಮಲಗಳು | 32 |
| ವಸ್ತ್ರ ಉಡಿಸುವ ಸ್ಥಳದಲ್ಲಿರುವ ಉದ್ದಪಟ್ಟಿಗಳು | 4 |
| ಒಟ್ಟು | 116 |

## ಪೀಠಪೂಜೆ

ಭಗವದಾರಾಧನೆಯಲ್ಲಿ ಪೀಠಪೂಜೆಯು ವಿಶಿಷ್ಟವಾದ ಭಾಗ. ಇದು ಉಪಾಸಕನಲ್ಲಿ ಜ್ಞಾನ–ಭಕ್ತಿ–ವೈರಾಗ್ಯಗಳನ್ನು ಬೆಳೆಸುವುದು. ಈ ಪೀಠಪೂಜೆಯಿಂದ ಭಗವಂತನ ವ್ಯಾಪ್ತಿ, ಅವನ ನಿಯಂತ್ರಣಶಕ್ತಿ, ಆ ಸ್ವಾಮಿಯ ಕಾರುಣ್ಯ, ಹಾಗೂ ಸರ್ವೋತ್ತಮತ್ವಾದಿಗಳ ಪರಿಚಯವಾಗುವುದು. ಕಾಲನಾಮಕಪರಮಾತ್ಮನ ಉಪಾಸನೆಯು ಸಿದ್ಧಿಸುವುದು. ಭಗವಂತನು ತನಗೆ ತಾನೇ ಸೇವ್ಯ ಸೇವಕನಾಗಿರುವನು. ಜೀವರಿಂದ ಆ ಪ್ರಭುವಿಗೆ ಯಾವತರಹದ ಪ್ರಯೋಜನವೂ ಇಲ್ಲ. ಅವನಿಂದಲೇ ಜಗತ್ತಿಗೆ ಆನಂದ, ಎಂದು ತಿಳಿದುಬರುವುದು. ಈ ಪೀಠಪೂಜೆಯಿಂದ ಭಗವಂತನಿಂದ ಧರಿಸಲ್ಪಟ್ಟ ಬ್ರಹ್ಮಾಂಡದ

Rarest Archiver

ಪರಿಚಯವಾಗಿ '-ಬಹುಚಿತ್ರಜಗತ್ ಬಹುಧಾ ಕರಣಾತ್ ಪರಶಕ್ತಿರನಂತಗುಣಃ ಪರಮಃ" ಎಂಬ ಜ್ಞಾನವು ಮೂಡಿಬರುವುದು. ಕೊನೆಯಲ್ಲಿ ದೇವಾಧಿದೇವನ ಸೇವೆಯಲ್ಲಿ ಲಕ್ಷ್ಮೀ-ವಾಯು ಮೊದಲಾದ ದೇವತೆಗಳು ವಿನಮ್ರಭಾವದಿಂದ ತೊಡಗಿರುವುದರ ದರ್ಶನದಿಂದ, ಉಪಾಸಕನಿಗೆ ತನ್ನ ಸ್ಥಾನಮಾನಗಳ ಅರಿವು ಉಂಟಾಗಿ, ನಿರಹಂಕಾರದೊಟ್ಟಿಗೆ "ದಾಸೋಹಂ ತವ ದಾಸೋಹಂ" ಎಂಬ ಭಾವವು ಮೂಡಿನಿಲ್ಲುವುದು.

"ಪೂಜ್ಯಶ್ಚ ಭಗವಾನ್ವಿಷ್ಣುಃ ಚಕ್ರಾಬ್ಜಾದಿಕ ಮಂಡಲೇ" ಇದು ಆಚಾರ್ಯರ ಆದೇಶ. ಪೀಠಸ್ಥನಾದ ಭಗವಂತನ ಪೂಜೆಯನ್ನು ಚಕ್ರಾಬ್ಜಮಂಡಲದ ಮೇಲೆ ನಿರ್ವಹಿಸಬೇಕು. ಚಕ್ರಾಬ್ಜಮಂಡಲದಲ್ಲಿ ತ್ರಿಕೋಣದಿಂದ ಯುಕ್ತವಾದ ಎಂಟುವಲಯಗಳಿವೆ. ತ್ರಿಕೋಣ ಹಾಗೂ 8 ವಲಯಗಳಲ್ಲಿರುವ ಭಗವಂತನ ಹಾಗೂ ಪರಿವಾರದೇವತೆಗಳ ರೂಪಗಳನ್ನು ಲೆಕ್ಕಿಸಿದಲ್ಲಿ ಒಟ್ಟು ಐದುನೂರಾತೊಂಭತ್ತೇಳು (597) ರೂಪಗಳಾಗುವವು.

| | | |
|---|---|---|
| 1. | ಪೀಠಸ್ಥಾನದಲ್ಲಿರುವ ಮಧ್ಯದ ಮೊದಲನೆಯ ವಲಯದಲ್ಲಿ | 3 |
| 2. | ತ್ರಿಕೋಣದಲ್ಲಿ | 6 |
| 3. | ಎರಡನೆಯ ವಲಯದಲ್ಲಿ | 6 |
| 4. | ಮೂರನೇ ವಲಯದಲ್ಲಿ | 13 |
| 5. | ನಾಲ್ಕನೇ ವಲಯದಲ್ಲಿ | 147 |
| 6. | ಐದನೇ ವಲಯದಲ್ಲಿ | 149 |
| 7. | ಆರನೇ ವಲಯದಲ್ಲಿ | 126 |
| 8. | ಏಳನೇ ವಲಯದಲ್ಲಿ | 96 |
| 9. | ಎಂಟನೇ ವಲಯದಲ್ಲಿ | 51 |
| | ಒಟ್ಟು | 597 |

**ಪೀಠದಿಂದ ಯುಕ್ತವಾದ ಮಂಟಪದ ಅಡಿಭಾಗದಲ್ಲಿ ಪರಮಪುರುಷ, ಆಧಾರ ರೂಪಿಣೀಶಕ್ತಿ, ವಿಷ್ಣುಕೂರ್ಮ, ವಾಯುಕೂರ್ಮ, ಅನಂತನಾಮಕಶೇಷ, ಭೂದೇವಿಯಿಂದ ಅಭಿಮನ್ಯಮಾನವಾದ ಪೃಥಿವೀ, ವರುಣನಿಂದ ಅಭಿಮನ್ಯಮಾನವಾದ ಕ್ಷೀರಸಾಗರ, ರಮಾರೂಪಾತ್ಮಕವಾದ ಶ್ವೇತದ್ವೀಪ – 8.**

ಗುರುರಾಜರ ಬೃಂದಾವನದ ಕೆಳಭಾಗದಲ್ಲಿರುವ ಎಂಟು ಉಪಭಾಗಗಳು ಇವುಗಳಿಗೆ ಪ್ರತೀಕಗಳಾಗಿವೆ.

ಶ್ವೇತದ್ವೀಪದ ಮೇಲ್ಭಾಗದಲ್ಲಿ ಪೀಠದಿಂದ ಯುಕ್ತವಾದ ರಮಾತ್ಮಕವಾದ ದಿವ್ಯರತ್ನಮಂಟಪವಿರುತ್ತದೆ. ಇದರ ಮಧ್ಯದಲ್ಲಿ ರಮಾತ್ಮಕವಾದ ಆರುದಳಗಳುಳ್ಳ

Rarest Archiver

ಕಮಲವಿರುತ್ತದೆ. ಗುರುರಾಜ ಬೃಂದಾವನದ ಮೇಲಿನ ಎರಡನೆಯ ಭಾಗವು ರಮಾತ್ಮಕವಾದ ಮಂಟಪಕ್ಕೆ ಪ್ರತಿರೂಪವಾಗಿದೆ. ಮುಂಬದಿಯಿಂದ ಗುರುರಾಜರ ಬೃಂದಾವನವನ್ನು ನೋಡಿದಾಗ ಮಂಟಪದ ಆಕಾರವು ಸ್ಪಷ್ಟವಾಗುತ್ತದೆ. ಅಡ್ಡಪಟ್ಟಿಯಲ್ಲಿರುವ ಕಮಲಗಳು ರಮಾತ್ಮಕವಾದ ಆರುದಳದಕಮಲಕ್ಕೆ ಸೂಚಕಗಳಾಗಿವೆ. ಕೆಲವರ ಹೇಳಿಕೆಯಂತೆ ಆರುದಳ ಕಮಲದ ಕೆಳಗಡೆ ಮತ್ತೊಂದು ಎಂಟುದಳ ಕಮಲವಿದೆ ಎಂದು. ಬೃಂದಾವನದಲ್ಲಿರುವ ಕಮಲಗಳು ಎಂಟುದಳಗಳಿಂದ ಕೂಡಿದವುಗಳಾಗಿವೆ. ಈ ಎಂಟು ದಳಗಳಲ್ಲಿ ಆರುದಳಗಳು ಇವೆ ಎಂಬುದನ್ನು ಮರೆಯಬಾರದು. ಆರರಲ್ಲಿ ಎಂಟಿಲ್ಲ. ಆದರೆ ಎಂಟರಲ್ಲಿ ಆರು ಇದೆ.

| | |
|---|---|
| ರಮಾರೂಪ ದಿವ್ಯರತ್ನ ಮಂಟಪ | 1 |
| ಮಂಟಪದ ಮಧ್ಯಭಾಗದಲ್ಲಿರುವ ಕಮಲದ ಆರುದಳಗಳಲ್ಲಿ –ಸೂರ್ಯ–ಚಂದ್ರ–ಅಗ್ನಿ–ಶ್ರೀ–ಭೂ–ದುರ್ಗಾರೂಪಗಳು ಇವೆ | 6 |
| ಕಮಲದ ನಾಲ್ಕು ದಿಕ್ಕುಗಳಲ್ಲಿರುವ ಸೋಪಾನಗಳ ಸ್ಥಾನದಲ್ಲಿ ಆತ್ಮ–ಅಂತರಾತ್ಮ–ಪರಮಾತ್ಮ–ಜ್ಞಾನಾತ್ಮರೂಪಗಳು ಇವೆ. | 4 |
| ಕಮಲದ ಸುತ್ತಲೂ ಎಂಟುದಿಕ್ಕುಗಳಲ್ಲಿ ಸೇವೆಸಲ್ಲಿಸುತ್ತಿರುವ ವಿಮಲಾ–ಉತ್ಕರ್ಷಿಣೀ–ಜ್ಞಾನಾ–ಕ್ರಿಯಾ–ಯೋಗಾ–ಪ್ರಹ್ವಾ–ಸತ್ಯಾ–ಈಶಾನಗಳೆಂಬ ಭಗವಂತನ ಸ್ತ್ರೀರೂಪಗಳು ಇವೆ. | 8 |
| ಕಮಲದ ಮಧ್ಯದಲ್ಲಿದ್ದು, ವಿಮಲಾದಿರೂಪಗಳಿಂದ ಸಮರ್ಪಿಸಲ್ಪಡುತ್ತಿರುವ ಛತ್ರಚಾಮರಾದಿಸೇವೆಗಳನ್ನು ಸ್ವೀಕರಿಸಿ, ಆರಾಧ್ಯಮೂರ್ತಿಗೆ ಸಲ್ಲಿಸುವ "ಅನುಗ್ರಹಾ" ಎಂಬ ಭಗವಂತನ ಮತ್ತೊಂದು ಸ್ತ್ರೀರೂಪವಿದೆ. | 1 |
| ಪೀಠಮಧ್ಯದಲ್ಲಿ ಯೋಗಪೀಠಸ್ವರೂಪನಾದ ಅನಂತನಾಮಕಶೇಷನಿರುವನು | 1 |
| ಶೇಷನ ಮೇಲೆ ಶ್ರೀಭೂಸಹಿತನಾದ ನಾರಾಯಣ | 3 |
| ಒಟ್ಟು | 24 |
| ಅಗ್ನಿ–ನಿಋುರುತಿ–ವಾಯು–ಈಶಾನ್ಯದಿಕ್ಕುಗಳಲ್ಲಿರುವ ಪೀಠದ ಕಾಲುಗಳ ಕೆಳಭಾಗದಲ್ಲಿ, ಕ್ರಮವಾಗಿ ಗರುಡ–ವೇದವ್ಯಾಸ, ದುರ್ಗಾ–ಸರಸ್ವತೀರೂಪಗಳು ಇವೆ. | 4 |
| ಇವೇ ಕಾಲುಗಳ ಮೇಲ್ಭಾಗದಲ್ಲಿ ಕ್ರಮವಾಗಿ ಯಮ–ವಾಯು –ಶಿವ–ಇಂದ್ರರೂಪಗಳು ಇವೆ. | 4 |

Rarest Archiver

| | |
|---|---|
| ಪೂರ್ವಾದಿ ನಾಲ್ಕುದಿಕ್ಕುಗಳಲ್ಲಿರುವ ಪೀಠಫಲಕಗಳಲ್ಲಿ ಕ್ರಮವಾಗಿ, ನಿಋರುತಿ, ದುರ್ಗಾ–ಕಾಮ–ರುದ್ರರೂಪಗಳು ಇವೆ. | 4 |
| ಪೀಠದ ಕೆಳಭಾಗದಲ್ಲಿರುವ ರೂಪಗಳು | 8 |
| | 20 |

## ಪೀಠಪೂಜೆಯ ಆವರಣ ದೇವತೆಗಳು

ಪೀಠಪೂಜೆಯಲ್ಲಿ ಒಟ್ಟು ಏಳುಆವರಣಗಳಿವೆ. ಒಳಗಿನ ಐದುಆವರಣಗಳಿಗೆ ಭಗವಂತನ ಹಾಗೂ ರಮಾದೇವಿಯ ರೂಪಗಳೆ ಆವರಣ ದೇವತಾರೂಪಗಳಾಗಿವೆ. ಕೊನೆಯ ಆರು ಮತ್ತು ಏಳನೇ ಆವರಣಗಳಲ್ಲಿ ಬ್ರಹ್ಮಾದಿದೇವತೆಗಳು ಇರುತ್ತಾರೆ.

| | | |
|---|---|---|
| **ಪ್ರಥಮಾವರಣ** | ಕೃದ್ಧೋಲ್ಕ, ಮಹೋಲ್ಕ, ವೀರೋಲ್ಕ, ದ್ಯುಲ್ಕ, ಸಹಸ್ರೋಲ್ಕ, ಸಹಸ್ರೋಲ್ಕ, ಸಹಸ್ರೋಲ್ಕ, ಸಹಸ್ರೋಲ್ಕ. | 8 |
| **ದ್ವಿತೀಯಾವರಣ** | ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಮಾಯಾ, ಜಯಾ, ಕೃತಿ, ಶಾಂತಿ | 8 |
| **ತೃತೀಯಾವರಣ** | ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂಧನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ | 12 |
| **ಚತುರ್ಥಾವರಣ** | ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಅಚ್ಯುತ, ಜನಾರ್ದನ, ಉಪೇಂದ್ರ, ಹರಿ, ಕೃಷ್ಣ | 12 |
| **ಪಂಚಮಾವರಣ** | ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಭಾರ್ಗವ, ರಾಮ, ಕೃಷ್ಣ, ಬುದ್ಧ, ಕಲ್ಕಿ, ಅನಂತ, ವಿಶ್ವ | 12 |
| **ಷಷ್ಠಾವರಣ** | ಅನಂತ, ಬ್ರಹ್ಮ, ವಾಯು, ಈಶಾನ್ಯ, ಗರುಡ, ವಾರುಣಿ, ಗಾಯತ್ರಿ, ಭಾರತಿ, ಗಿರಿಜಾ, ಸೌಪರ್ಣಿ | 10 |
| **ಸಪ್ತಮಾವರಣ** | ಇಂದ್ರ, ಅಗ್ನಿ, ಯಮ, ನಿಋರುತಿ, ವರುಣ ವಾಯು, ಕುಬೇರ, ಈಶಾನ್ಯ, ಅನಂತ, ಬ್ರಹ್ಮ | 10 |
| | | 72 |

Rarest Archive

| | |
|---|---|
| ಮಂಟಪದಲ್ಲಿರುವ ಮೂರ್ತಿಗಳು ಒಟ್ಟು | 24 |
| ಕಾಲುಗಳಲ್ಲಿ, ಪೀಠಫಲಕಗಳಲ್ಲಿ ಮತ್ತು ಪೀಠದ ಕೆಳಭಾಗದಲ್ಲಿ ಬರುವ ಮೂರ್ತಿಗಳು ಒಟ್ಟು | 20 |
| ಏಳುಆವರಣಗಳಲ್ಲಿ ಬರುವ ರೂಪಗಳು | 72 |
| ಒಟ್ಟು ಮೂರ್ತಿಗಳು | 116 |
| ರಾಯರ ಬೃಂದಾವನದಲ್ಲಿರುವ ಭಾಗಗಳು | 116 |


ಒಟ್ಟು ಪೀಠಪೂಜೆಯಲ್ಲಿ ಬರುವ ಭಗವಂತನ ಹಾಗೂ ಪರಿವಾರ ದೇವತೆಗಳ ರೂಪಗಳು ಕೆಳಕಂಡಂತೆ ಇವೆ.

| | |
|---|---|
| ಚಕ್ರಾಬ್ಜಮಂಡಲದಲ್ಲಿ ಬರುವ ರೂಪಗಳು | 597 |
| ಮಂಟಪದಲ್ಲಿ ಬರುವ ರೂಪಗಳು | 24 |
| ಕಾಲುಗಳಲ್ಲಿ, ಪೀಠಫಲಕಗಳಲ್ಲಿ ಮತ್ತು ಪೀಠದ ಕೆಳಭಾಗದಲ್ಲಿ ಬರುವ ಮೂರ್ತಿಗಳು ಒಟ್ಟು | 20 |
| ಏಳು ಆವರಣಗಳಲ್ಲಿರುವ ರೂಪಗಳು | 72 |
| | 713 |

ಗುರುರಾಜರ ಬೃಂದಾವನದಲ್ಲಿ ಸ್ಥಾಪಿಸಲ್ಪಟ್ಟ 713 ಶಾಲಗ್ರಾಮಗಳು, ಪೀಠಪೂಜೆಯಲ್ಲಿ ಬರುವ ಭಗವಂತನ ಹಾಗೂ ಪರಿವಾರದೇವತೆಗಳ ರೂಪಗಳಿಗೆ (713) ಸ್ಪಷ್ಟಸೂಚಕಗಳಾಗಿವೆ.

ಇವು ಕಲ್ಪನಾಪ್ರಪಂಚದಲ್ಲಿ ಹೇಳಿದ ಮಾತುಗಳಲ್ಲ. ಹರಿದಾಸರ ಕೃತಿಗಳೇ ಈ ಎಲ್ಲಕ್ಕೂ ಆಧಾರ. ಅನೇಕ ಹರಿದಾಸರು ಗುರುಸಾರ್ವಭೌಮರ ಬೃಂದಾವನವನ್ನು ಶ್ರೀಹರಿಯ ನಿಜಮಂದಿರವನ್ನಾಗಿ ಕಂಡು ವರ್ಣಿಸಿರುವರು.

Rarest Archiver




ಗುರು ರಾಘವೇಂದ್ರತೀರ್ಥರ ಮೂಲ ಬೃಂದಾವನ
ಮಂತ್ರಾಲಯ

Rarest Archiver

ಹರೇಶ್ರೀನಿವಾಸ **1** ಗುರೋರಾಘವೇಂದ್ರ

# ಬೃಂದಾವನವೋ ಹರಿಮಂದಿರವೋ

## ಮುಂದಿನ ಭಾಗ





Rarest Archiver

ಹರೇಶ್ರೀನಿವಾಸ **2** ಗುರೋರಾಘವೇಂದ್ರ

# ಬೃಂದಾವನವೋ ಹರಿಮಂದಿರವೋ


## ಬಲದ ಭಾಗ




Rarest Archiver

# ಬೃಂದಾವನವೋ ಹರಿಮಂದಿರವೋ

## ಹಿಂದಿನ ಭಾಗ





Rarest Archive

ಹರೇಶ್ರೀನಿವಾಸ **4** ಗುರೋರಾಘವೇಂದ್ರ

# ಬೃಂದಾವನವೋ ಹರಿಮಂದಿರವೋ

## ಎಡದ ಭಾಗ




Rarest Archiver

# ಹರಿದಾಸರ ನುಡಿಗಳಲ್ಲಿ ಬೃಂದಾವನ

–ಗೋಪಾಲದಾಸರು

ವಂದನೆ ಮಾಡುವ ಬಾರೆ
ಇಂದುಮುಖಿಯಳೆ ರಾಘ–
ವೇಂದ್ರ ಬೃಂದಾವನವನು
ಅಹಿಶಾಯಿ ಇವರಿಂದ ರಹಸ್ಯಅರ್ಚನೆಯ ಕೊಂಡು
ಸಹಕಾರಿಗಳು ಸರ್ವರ ಸಹಿತ ಒಂದಂಶದಿ
ಶ್ರೀಹರಿ ತಾನಿಲ್ಲಿ ನಿಂದು....
ಅನಿರುದ್ಧ ನಾಲ್ಕುಮೂರುತಿ ಘನವಾಗಿ ತಾನಿದ್ದು
ದೇವದೇವೇಶ ಕೃಷ್ಣ ಗೋಪಾಲವಿಠಲ ಇಲ್ಲಿ
ಆವಾಗ ಸೇವಿಸಿಕೊಳುತಿಪ್ಪ

## ಸುಳಾದಿ

ನರಹರಿ ರಾಮ ಕೃಷ್ಣ ಸಿರಿವೇದವ್ಯಾಸ
ಎರಡೆರಡು ನಾಲ್ಕು ಹರಿಮೂರುತಿಗಳು
ಪರಿವಾರ ಸಹಿತಾಗಿ ಸಿರಿಸಹಿತ ನಿಂದು

ಸುರಗುರುಮಧ್ವಾಚಾರ್ಯರೇ ಮೊದಲಾಗಿ
ತರುವಾಯದಲ್ಲಿನ್ನು ತಾರತಮ್ಯಾನುಸಾರ
ಪರಿಪರಿಯತಿಗಳು ಇರುತಿಪ್ಪರಿಲ್ಲಿ

ಹರಿಯನ್ನು ಪೂಜಿಸುತ ಇರುಳು ಹಗಲು ಬಿಡದೆ
ಪರಿಪರಿವಿವರವ ಪರಿಪರಿ ಕೇಳ್ವರು
ಗರುಡವಾಹನ ರಂಗಗೋಪಾಲವಿಠಲ ತನ್ನ
ಶರಣರ ಪಾಲಿಸುತಿರುತಿಪ್ಪನಿಲ್ಲಿ

"ಆಚಾರ್ಯಮಧ್ವರೇಮೊದಲಾದ ಯತಿಶ್ರೇಷ್ಠರು ಬೃಂದಾವನದಲ್ಲಿ ಸನ್ನಿಹಿತನಾಗಿರುವ ಹರಿಯನ್ನು ಪೂಜಿಸುತ್ತಿರುವರು" ಎಂಬ ಗೋಪಾಲದಾಸರ ಮಾತು ಮನನೀಯವಾಗಿದೆ.

ಮಾನ್ಯಮಾನವಿಜಗನ್ನಾಥದಾಸರು ಸಹ, "ಗುರುರಾಘವೇಂದ್ರರು ಬೃಂದಾವನ ಮಂದಿರಗತನಾದ ಸಿರಿಕಾಂತನನ್ನು ನಿರಂತರ ಪೂಜಿಸುತ್ತಿರುವವರು" ಎಂದೇ ತಮ್ಮ ಕೃತಿಯಲ್ಲಿ ಹೇಳಿರುವರು.

Rarest Archiver

**ಶಾಂತತೆಯ ಪೊಂದಿ ಮಂತ್ರಾಲಯದಿ ಬೃಂದಾವ-**
**ನಾಂತರದೊಳಿರುವ ಸಿರಿಕಾಂತ ಹರಿಯ**
**ಚಿಂತಿಸುತಲಿಹ ಸರ್ವತಂತ್ರಸ್ವತಂತ್ರ ಕರು-**
**ಣಾಂತರಂಗನೇ ರಾಘವೇಂದ್ರಯತಿವರ್ಯ ॥**

ಅಭಿನವಜನಾರ್ಧನವಿಠಲದಾಸರು (ಪ್ರೇಮದಾಸರು) ಗುರುರಾಜರ ಅಂತರಂಗ ಭಕ್ತರು. ಒಮ್ಮೆ ಮಂತ್ರಾಲಯದಲ್ಲಿ ಗುರುರಾಜರ ರಥೋತ್ಸವ. ರಥದ ಮುಂದೆ ಭಕ್ತರು ಹಾಡಿ ಕುಣಿಯುತ್ತಿರುವರು. ಪ್ರೇಮದಾಸರಿಗೆ ಎರಡೂಕಾಲುಗಳಿರಲಿಲ್ಲ. ಸುತ್ತಲಿದ್ದ ಪರಿವಾರ ರಥಸ್ಥಗುರುಗಳನ್ನು ಕಾಣಲು ಓಡಿದರು. ದಾಸರು ಒಂಟಿಗರಾದರು. ದಾಸರಿಗೆ ದುಃಖತಡೆಯಲಾಗಲಿಲ್ಲ. ಎಲ್ಲರಂತೆ ಗುರುರಾಜರ ಮುಂದೆ ಮೈಮರೆತು ಹಾಡಿ ಕುಣಿಯುವ ಭಾಗ್ಯ ತಮಗಿಲ್ಲದಂತಾಯಿತಲ್ಲಾ ಎಂದು ದುಃಖಿಸಿದರು. ಭಕ್ತಿಯು ಹಾಡಿನ ರೂಪದಲ್ಲಿ ಹೊರಹೊಮ್ಮಿತು.

**ಗುರವೆ ನೀ ಕರುಣಿಸದಿರಲು ಉದ್ಧರಿಸುವ**
**ಧೊರೆಗಳೀ ಧರೆಯೊಳುಂಟೆ ॥**
**ಕರುಣಾಸಾಗರ ಎನ್ನ ಕರೆದು ಕೈಪಿಡಿಯೊ ನೀ**
**ಕರುಣಿಸೊ ಸುಧೀಂದ್ರಕರಜರಾಘವೇಂದ್ರ**
**ತರುಣಿ ತರುಳರೀಶರೀರಬಂಧುಗಳು – ಪಚರಿಸಲಾದರಿಪರೆಲ್ಲ ।**
**ಚರಣವಿಲ್ಲದೆ ಪಕ್ಕಮುರಿದು ಬಿದ್ದ ಗುಬ್ಬಿ-**
**ಮರಿಯಂತೆ ಬಾಯ್ಬಿಡುತಿರಲು ನೀನೊಲ್ಲರೇ ॥**

ಕರುಣಾಮೂರ್ತಿಗಳಾದ ಗುರುರಾಜರು ದಾಸರನ್ನು ಹಿಂದಿನಿಂದ ಎತ್ತಿನಿಲ್ಲಿಸಿದರು. ದಾಸರ ಆನಂದಕ್ಕೆ ಎಣೆಯಿಲ್ಲ. ಮೈಮರೆತರು. ಸ್ತುತಿಸುತ್ತಾ ಕುಣಿದರು. ಆಗ ಅವರ ಮುಖಕಮಲದಿಂದ ಕೃತಿಯು ಹೊರಹೊಮ್ಮಿತು.

**ಬೇಗ ಸಾಗಿಬಾರಯ್ಯ – ರಾಘವೇಂದ್ರಗುರುವೆ ।**
**ಬಾಗಿ ಭಕುತಿಲಿ ಚೆನ್ನಾಗಿ ತುತಿಪೆ ನಿನ್ನ ॥**

**ಗಿರಿಯ ವೆಂಕಟ ನರಹರಿ ರಾಮ ಕೃಷ್ಣ ವ್ಯಾಸ**
**ಸಿರಿನಾರಾಯಣ ತನ್ನ ವರಮೂರ್ತಿಗಳಿಂದ**
**ಸರಿಸಜಭವ ವಾಯು ಸರಸ್ವತಿ ಭಾರತಿ ತ್ರಿ-**
**ಪುರಹರ ಶೇಷ ವಿಪ ಸುರಪಾದ್ಯರ ಕೈಯಿಂದ**
**ಥರಥರದಲಿ ಪರಿ ಹರಿಸೇವೆಯ ವಿ-**
**ಸ್ತಾರವಾಗಿ ಕೊಳ್ಳುತ ಮೆರಗುತ ನೆಲಸಿಹ**

Rarest Archiver

**ಸ್ಥಿರವಾಗಿ ನಿಂದು ಆಶ್ಚರ್ಯವ**
**ಧರೆಗೆ ತೋರ್ಪುದಕೆ ಮೆರೆಯುತಲಿಹ**

ದಾಸರು ಈ ಚರಣದಲ್ಲಿ ಗುರುಗಳ ಬೃಂದಾವನದಲ್ಲಿ ರಾಮಕೃಷ್ಣಾದಿ ರೂಪಗಳಿರುವುದಾಗಿಯೂ, ಆರೂಪಗಳನ್ನು ಬ್ರಹ್ಮಾದಿದೇವತೆಗಳು ಪರಿಪರಿಯಿಂದ ಪೂಜಿಸುತ್ತಿರುವುದಾಗಿಯೂ ವರ್ಣಿಸಿರುವರು. ವೇಂಕಟವಿಠಲರು ಸಹ.

**"ಬೃಂದಾವನ ನೋಡಿರೋ ರಾಯರ ಬೃಂದಾವನ**
**ಸತ್ಯಾದಿಗುಣಸಿಂಧು ವೇಂಕಟವಿಠಲನ್ನ**
**ನಿತ್ಯ ಸನ್ನಿಧಿಯಿಂದ ನಿಹಿತ ಪೂಜೆಗೊಂಬ"**

ಎಂದು ಹಾಡಿ ಗುರುಗಳ ಬೃಂದಾವನದಲ್ಲಿ ಶ್ರೀನಿವಾಸನು ಸದಾ ಸನ್ನಿಹಿತನಾಗಿರುವನೆಂದು ಸಾರಿರುವರು.

ಜಗನ್ನಾಥದಾಸರ ಅಚ್ಚುಮೆಚ್ಚಿನ ಶಿಷ್ಯರಾದ ಗುರುಶ್ರೀಶವಿಠಲರು ಗುರುಗಳ ಬೃಂದಾವನವನ್ನು ಪರವೈಕುಂಠಕ್ಕೆ ಸರಿಮಿಗಿಲೆಂಬುದಾಗಿ ಹೇಳಿರುವರು.

ಭಗವಂತನ ನಿತ್ಯಸನ್ನಿಧಿಯಿಂದ ಒಪ್ಪುತ್ತಿರುವುದರಿಂದ, ಗುರುಗಳ ಬೃಂದಾವನ ವೈಕುಂಠಕ್ಕೆ ಸಮವಾಗಿದೆ ಎಂಬುದು ಸರಿ. ದಾಸರು ಅಲ್ಲಿಗೆ ನಿಲ್ಲಲಿಲ್ಲ. ಗುರುರಾಜರ ಬೃಂದಾವನ ವೈಕುಂಠಕ್ಕಿಂತಲೂ ಮಿಗಿಸಲು ಎಂದು ಹೇಳಿದ್ದಾರೆ. ಇದಕ್ಕೆ ಕಾರಣವನ್ನು ಸಹ ದಾಸರೇ ತಿಳಿಸುತ್ತಾ –

**ಜಲಜನಾಭನು ನಾಲ್ಕುರೂಪದಿಂದಿವರಲ್ಲಿ**
**ಸಿಲುಕಿ ಪೂಜೆಯ ಗೊಂಬ ಸತತ ಮೋಕ್ಷದಾತ**

**ವೈಕುಂಠಕ್ಕೆ ಸರಿಮಿಗಿಲು ಎಂದೆನಿಪುದೋ**

ಭಗವಂತನ ಮಂದಿರಗಳೆನಿಸುವ ವೈಕುಂಠ–ಶ್ವೇತದ್ವಿಪ–ಅನಂತಾಸನಗಳಲ್ಲಿ ಶ್ರೀಹರಿಯ ಒಂದೊಂದೇರೂಪಗಳಿವೆ. ವೈಕುಂಠದಲ್ಲಿ ವಿಕುಂಠ, ಶ್ವೇತದ್ವೀಪದಲ್ಲಿ ವಾಸುದೇವ, ಅನಂತಾಸನದಲ್ಲಿ ನಾರಾಯಣ, ಗುರುರಾಜರ ಬೃಂದಾವನದಲ್ಲಿ ಶ್ರೀ ನರಸಿಂಹ, ಕೃಷ್ಣ, ರಾಮ, ವೇದವ್ಯಾಸ, ಹಯಗ್ರೀವ ಇವೇ ಮೊದಲಾದ ರೂಪಗಳು ನಿಂತಿರುವುವು. ಅತ ಏವ ಗುರುಗಳ ಬೃಂದಾವನ ವೈಕುಂಠಕ್ಕೆ ಮಿಗಿಲು. ದಾಸರ ಚಿಂತನೆ – ಅನುಸಂಧಾನಗಳು ಅಪೂರ್ವ. "ದಾಸರೇ ಗತಿಯು ನಮಗೆ, ಹರಿದಾಸರೇ ಗತಿಯು ನಮಗೆ."

ಜ್ಞಾನಿಗಳು ಯಾವ ವಸ್ತುವನ್ನೂ ತಮ್ಮದನ್ನಾಗಿ ಚಿಂತಿಸುವುದಿಲ್ಲ. ಅವರ ದೃಷ್ಟಿಯಲ್ಲಿ "ಈಶಾವಾಸ್ಯಮಿದಂ ಸರ್ವಂ". ಜ್ಞಾನಿಗಳು ತಮ್ಮ ಶರೀರವನ್ನು ಸಹ

Rarest Archiver

ಹರಿಗೆ ಆವಾಸಯೋಗ್ಯವಾದ ಪಟ್ಟಣವನ್ನಾಗಿ, ಮಂದಿರವನ್ನಾಗಿ, ರಥವನ್ನಾಗಿ ಚಿಂತಿಸುತ್ತಾರೆ. "ದೇಹೋ ದೇವಾಲಯಃ ಪ್ರೋಕ್ತಃ". ಇದು ಆರ್ಷವಾಣಿ. ದೇವರಿದ್ದ ಮನೆಯೇ ದೇವಾಲಯ. "ನಂದೇ ನದೋ ಸ್ವಾಮಿ ನಿಂದೆ ಇದೆಲ್ಲವೂ. ತನು ನಿನ್ನದು ಜೀವನ ನಿನ್ನದು". ಇದು ಎಲ್ಲ ಹರಿದಾಸರ ಅಂತರಂಗ. ಭಾಗವತೋತ್ತಮರೂ, ವಾಯುದೇವರ ಆವೇಶದಿಂದ ನಿತ್ಯಶೋಭಿಸುವವರೂ ಆದ ರಾಘವೇಂದ್ರರು ತಮ್ಮ ಮೇಲಿರುವ ಬೃಂದಾವನವನ್ನು ತಮ್ಮ ಸಮಾಧಿಯನ್ನಾಗಿ ಚಿಂತಿಸಲಾರರು. ಬೃಂದಾವನ ಅವರ ಪಾಲಿಗೆ ಹರಿಮಂದಿರ. ಯಥಾಯೋಗ್ಯವಾಗಿ ಈ ರೀತಿ ಎಲ್ಲರೂ ಚಿಂತಿಸಲಿ ಎಂಬ ಭಾವನೆಯಿಂದಲೇ, ವಿಶಿಷ್ಟವಾದ ರೀತಿಯಲ್ಲಿ ಬೃಂದಾವನವನ್ನು ಮಾಡಿಸಿದರು. 713 ಸಾಲಿಗ್ರಾಮಗಳನ್ನು ಬೃಂದಾವನದಲ್ಲಿ ಸ್ಥಾಪಿಸಿದರು.

ಈ ರೀತಿಯ ಚಿಂತನೆ ಕೇವಲ ವ್ಯಾಸರಾಜ–ವಾದಿರಾಜ–ರಾಘವೇಂದ್ರರ ಬೃಂದಾವನಗಳಿಗೆ ಮಾತ್ರ ಸೀಮಿತವಾಗಬಾರದು. ಎಲ್ಲ ಯತಿವರೇಣ್ಯರ ಬೃಂದಾವನಗಳೂ ಬೃಂದಾರಕವೃಂದವಂದಿತಪಾದಾರವಿಂದದ್ವಂದ್ವವುಳ್ಳ ಭಗವಂತನ ಮಂದಿರಗಳೇ. ಈ ಅನುಸಂಧಾನ ಬರಬೇಕೆಂಬ ಭಾವನೆಯಿಂದಲೇ ಎಲ್ಲ ಯತಿಗಳ ಬೃಂದಾವನದ ಕೆಳಗೆ ಕೂರ್ಮಾಸನವಿರುತ್ತದೆ. ಬೃಂದಾವನದ ಮಧ್ಯದಲ್ಲೋ, ಮೇಲ್ಭಾಗದಲ್ಲೋ ಶ್ರೀಹರಿಯ ಯಾವುದೋ ಒಂದುರೂಪವಿರುತ್ತದೆ. ಕೊನೆಗೆ ಬೃಂದಾವನದ ಮೇಲ್ಭಾಗದಲ್ಲಿ ಶಾಲಗ್ರಾಮದ ಸ್ಥಾಪನೆಯಂತೂ ಇದ್ದೇ ಇರುತ್ತದೆ. ಇನ್ನೂ ಮುಂದೆ ಎಲ್ಲಾ ಯತಿಗಳ ಬೃಂದಾವನಗಳನ್ನು ಈ ಅನುಸಂಧಾನದ ದೃಷ್ಟಿಯಲ್ಲಿ ನೋಡೋಣ; ಭಾಗ್ಯವಂತರಾಗೋಣ.

**ಮದವು ಮತ್ಸರ ಲೋಭ ಮೋಹವು**
**ಒದಗಬಾರದು ಎನ್ನ ಮನದಲಿ**
**ಪದುಮನಾಭನೆ ಜ್ಞಾನ–ಭಕ್ತಿ–ವಿರಕ್ತಿ ನೀನಿತ್ತು ॥**
**ಹೃದಯಮಧ್ಯದಿ ನಿನ್ನ ರೂಪವು**
**ವದನದಲಿ ತವ ನಾಮಮಂತ್ರವು**
**ಸದಯ ಪಾಲಿಸು ಬೇಡಿಕೊಂಬೆನೊ ಶೇಷಗಿರಿವಾಸ ॥**

**"ಹರೇ ಶ್ರೀನಿವಾಸ"**

Rarest Archiver

# ಹರಿಗೆ ಮಂದಿರವಾದ ಶಿಲೆ

(ಏಕಾಂತ ಬಯಸಿದ ಶ್ರೀಕಾಂತನ ದಾಸ)

(ಚಿಕ್ಕರೂಪಕ)

## ದೃಶ್ಯ 01

(ರಾಮ–ಲಕ್ಷ್ಮಣ–ಸೀತೆಯರು ದಂಡಕಾರಣ್ಯದಲ್ಲಿ ನಡೆದು ಬರುತ್ತಿದ್ದಾರೆ. ದೂರದಲ್ಲಿ ತುಂಗೆ ತುಂಬಿ ಹರಿಯುತ್ತಿದ್ದಾಳೆ. ಚಿಕ್ಕಬೆಟ್ಟ. ಕರೀಕಲ್ಲುಗಳ ಸಮೂಹ. ರಾಮಸೀತೆಯರ ಮುಂದೆ ಒಂದು ಕಪ್ಪುಬಣ್ಣದ ದೊಡ್ಡ ಗುಂಡು. ಸೀತೆ ರಾಮನ ಕಡೆ ನೋಡುತ್ತಾ, ಮುಗುಳುನಗೆಯಿಂದ.)

**ಸೀತೆ :** ಪ್ರಭೂ! ನಿಮ್ಮ ಪವಿತ್ರಪಾದಸ್ಪರ್ಶದಿಂದ ಆ ಗುಂಡನ್ನು ಪಾವನ ಮಾಡಿರಿ. ದೀರ್ಘಪ್ರಯಾಣವಾಗಿದೆ. ಸ್ವಲ್ಪ ವಿಶ್ರಮಿಸಿರಿ.

(ರಾಮ ಮಂದಸ್ಮಿತವದನಾರವಿಂದನಾಗಿ, ಗುಂಡಿನ ಸಮೀಪಕ್ಕೆ ಬಂದು–)

**ರಾಮ :** ಸೀತಾ! ನೀನೇ ಮುಂದು. ನಿನ್ನಿಂದಲೇ ಎಲ್ಲವೂ ಸಂಪದ್ಭರಿತ, ಆನಂದಮಯ.

**ಸೀತೆ :** ಆಜ್ಞೆ ಪ್ರಭೂ!

(ರಾಮ ಸೀತೆಯ ಕೈಹಿಡಿದು, ಅವಳನ್ನು ಗುಂಡಿನ ಮೇಲೆ ಕೂಡಿಸಿ, ತಾನು ಗುಂಡನ್ನೇರುವನು. ಲಕ್ಷ್ಮಣ ಈ ರಮಣೀಯದೃಶ್ಯವನ್ನು ಕಂಡು, ಆನಂದದಿಂದ ರಾಮನಿಗೆ ಹೇಳುವನು.)

**ಲಕ್ಷ್ಮಣ :** ಆಹಾ ರಾಮಭದ್ರ ಈ ಕಲ್ಲಿನ ಭಾಗ್ಯವೇ ಭಾಗ್ಯ! ಅಂದು ಆ ಶಿಲೆ ಬಾಲೆಯಾಯಿತು, ಈ ಶಿಲೆ...?

(ರಾಮ ಮುಗುಳ್ನಗೆಯಿಂದ ಶಿಲೆಯ ಮೇಲೆ ಕೈಯಾಡಿಸುವನು.)

**ಸೀತೆ :** ಹರಿಮಂದಿರವಾಗುವುದು.

## ದೃಶ್ಯ 02

(ರಾಘವೇಂದ್ರರು ತುಂಗಾತೀರದಲ್ಲಿ ಅಹ್ನೀಕಕ್ಕೆ ಕುಳಿತಿದ್ದಾರೆ. ಬಿಳಿಯಾದ ಗಡ್ಡ. ಆಧ್ಯಾತ್ಮತೇಜಸ್ಸು ದೇಹದಿಂದ ಹೊರಹೊಮ್ಮುತ್ತಿದೆ. ಹತ್ತಿರದಲ್ಲಿ ಇಬ್ಬರು ಶಿಷ್ಯರು

Rarest Archiver

ವಿನಯದಿಂದ ನಿಂತಿದ್ದಾರೆ. ಪಕ್ಕದಲ್ಲೇ ದಿವಾನ್‌ವೆಂಕಣ್ಣನು ಕೈಕಟ್ಟಿಕೊಂಡು ನಿಂತಿದ್ದಾನೆ. ರಾಘವೇಂದ್ರರು ಧ್ಯಾನದಲ್ಲಿ ಆನಂದವನ್ನು ಅನುಭವಿಸುತ್ತಿದ್ದಾರೆ. ಆರ್ತಭಾವದಿಂದ, ಸುಸ್ವರವಾಗಿ ಗುರುರಾಜರು ಮೈಮರೆತು ಹಾಡುತ್ತಾರೆ.)

**ಎಂದೆಂದೆನ್ನ ಮನದಿಂದ ಅಗಲದಿರೋ ।**
**ನಂದನಂದನ ಆನಂದಮೂರುತಿಯೇ ॥ಪ॥**

**ಬಹುಕಾಲ ನಿನ್ನ ಶ್ರವಣವೆಂಬ ಹೊನ್ನೋಲೆಯ**
**ಬಹುಮಾನದಿಂದೆನ್ನ ಕಿವಿಯೊಳಿಟ್ಟು**
**ಮಹಿತಮಂಗಳಸೂತ್ರವೆಂಬೊ ದಾಸ್ಯವನ್ನು**
**ಮಹಾನಂದದಿಂದ ಎನ್ನ ಕೊರಳೊಳು ಕಟ್ಟಿದೆಯಾಗಿ ॥1॥**

**ಸುಲಲಿತ ಸ್ಮೈರಣೆ ಎಂಬ ಭೂಷಣವಿತ್ತು**
**ಸಲಹಿದೆ ಬಹುಪ್ರೀತಿಲಿ ಸಖಿಸಂತೆನ್ನ**
**ಬೆಲೆಯಿಲ್ಲದ ಸುಜ್ಞಾನ ನಿಧಿಯನಿತ್ತು**
**ಜಲಜಾಕ್ಷ ಎನ್ನನು ಒಲಿದು ಆಳಿದೆಯಾಗಿ ॥2॥**

**ಎಲ್ಲಿ ನೀ ನಿಲ್ಲಿಸಿದರೇನು ಭಯವಿಲ್ಲ**
**ಬಲ್ಲೆನೋ ವಿಶ್ವವ್ಯಾಪಕನೆಂಬುದ**
**ಸಲ್ಲದೋ ಈ ಮುನಿಸೆನ್ನೊಳು ಶಿರಿಕೃಷ್ಣ**
**ಒಲ್ಲದಿದ್ದರೆ ನಿನ್ನ ಸೆರಗ ಪಿಡಿದೆಳವೆ ॥ 3॥**

(ಶಿಷ್ಯರು ಹಾಗೂ ದಿವಾನ್‌ವೆಂಕಣ್ಣ ಎಲ್ಲರೂ ಗುರುರಾಜರ ಅಮೃತವಾಣಿಯಿಂದ ಪುಲಕಿತಗಾತ್ರರಾಗಿ ಆನಂದಪಡುತ್ತಿದ್ದಾರೆ. ಹಾಡು ಮುಗಿಯಿತು. ರಾಘವೇಂದ್ರರು ಆನಂದಾಶ್ರುಗಳನ್ನು ವಸ್ತ್ರದಿಂದ ಒರಸಿಕೊಳ್ಳುತ್ತಾ, ದಿವಾನರ ಕಡೆನೋಡುತ್ತಾ, ತಮಗೆ ಸ್ವಲ್ಪದೂರದಲ್ಲಿರುವ ಸ್ಥಳವನ್ನು ತೋರಿಸಿ...)

**ರಾಘ : ದಿವಾನರೆ ! ನಡೆಯಿರಿ; ಅದೋ ಅಲ್ಲಿ ಕಾಣುವ ಸ್ಥಳದತ್ತ ಹೋಗೋಣ, ಆ ! ಧಶರಥರಾಮ! ಜಾನಕೀಮನೋಭಿರಾಮ ! ಕಲ್ಯಾಣಗುಣಗಣಧಾಮ ! ನನ್ನ ರಾಮ ಈ ಅಲ್ಪದಾಸನ, ಮೇಲೆ ತನ್ನ ಕರುಣಾರಸಕಾರಂಜಿಯನ್ನೇ ಹರಿಸಿದ್ದಾನೆ. ನಡೆಯಿರಿ.**

(ರಾಘವೇಂದ್ರರು ಆ ವೃದ್ಧಾಪ್ಯದಲ್ಲೂ ಆನಂದದಿಂದ ಹೆಜ್ಜೆಗಳನ್ನು ಹಾಕುತ್ತಾ ಮುನ್ನಡೆಯುವರು. ಎಲ್ಲರೂ ಗುರುಗಳನ್ನು ಅನುಸರಿಸಿದರು. ಸ್ವಲ್ಪದೂರ ಬಂದು, ಒಂದು ಸ್ಥಳದಲ್ಲಿ ನಿಂತರು ಗುರುರಾಜರು. ಆ ಸ್ಥಳದ ಎಲ್ಲಾಭಾಗಗಳನ್ನು ಆನಂದದಿಂದ ನೋಡುತ್ತಾ, ಸ್ಥಳಕ್ಕೆ ಬಗ್ಗಿ ನಮಸ್ಕರಿಸುವರು. ಸ್ವಲ್ಪಮಣ್ಣನ್ನು ತೆಗೆದುಕೊಂಡು, ಹಣೆ ಹಚ್ಚಿಕೊಂಡು ಮೈಯ್ಯೆಲ್ಲಾ ಸವರಿಕೊಳ್ಳುವರು. ದಿವಾನ್‌ವೆಂಕಣ್ಣನನ್ನು ನೋಡುತ್ತಾ...)

Rarest Archiver

ರಾಘ : – ದಿವಾನರೇ! ಈ ಸ್ಥಳ ಸಕಲಕ್ಷೇತ್ರಗಳ ಸನ್ನಿಧಾನದಿಂದ ಶೋಭಿಸುವ ಸ್ಥಳ. ಭಾಗವತೋತ್ತಮರ, ಭಗವಂತನ ಪಾದಸ್ಪರ್ಶದಿಂದ ಪವಿತ್ರವಾದ ಪರಮಪುಣ್ಯಸ್ಥಳ.

ವೆಂಕ : – ಗುರುಗಳೇ! ವಿಷಯವಿವರಿಸಿ ನಮ್ಮೆಲ್ಲರ ಜನ್ಮಗಳನ್ನು ಪಾವನ ಮಾಡಬೇಕು.

(ರಾಘವೇಂದ್ರರು ಮತ್ತೊಮ್ಮೆ ಸ್ಥಳಕ್ಕೆ ನಮಸ್ಕರಿಸುತ್ತಾ...)

ರಾಘ : ವೆಂಕಣ್ಣ ! ಇದು ಪ್ರಹ್ಲಾದರಾಜನು ಯಜ್ಞಮಾಡಿದ ಸ್ಥಳ. ಆ ಪ್ರಹ್ಲಾದನಲ್ಲಿ ಭಗವಂತ ತೋರಿದ ಕರುಣೆ ಅಪೂರ್ವ. ಪ್ರಹ್ಲಾದನು ನಿರ್ವಹಿಸಿದ ಆ ಯಜ್ಞದಲ್ಲಿ ಭಾಗವಹಿಸಲು ಬಂದ, ಸಕಲ ದೇವತೆಗಳು, ನಾರದಾದಿಬ್ರಹ್ಮಋಷಿಗಳು ಇಲ್ಲಿ ಯಜ್ಞನಾಮಕನಾದ ಶ್ರೀಹರಿಯ ದರ್ಶನಾನಂದಸಾಗರದಲ್ಲಿ ವಿಹರಿಸಿದರು. ಇದು ಸಾಲ್ವನಿಗೆ ಜಯಕೊಟ್ಟ ಸ್ಥಳ. ಗೀತಾಚಾರ್ಯನು, ಯೋಗೇಶ್ವೇರೇಶ್ವರನೂ ಆದ ಶ್ರೀಕೃಷ್ಣನು ಅರ್ಜುನನಿಂದ ಕೂಡಿ ವಿಹರಿಸಿದ ಸ್ಥಳ. ಇಲ್ಲಿ ಕ್ಷಣಕಾಲ ಮಾಡಿದ ಧ್ಯಾನ, ಅನಂತಕಾಲಗಳ ಧ್ಯಾನಕ್ಕೆ ಸಮಾನ.

(ವೆಂಕಣ್ಣನು ಸ್ಥಳಕ್ಕೂ, ಗುರುಗಳಿಗೂ ದಂಡಪ್ರಣಾಮಗಳನ್ನು ಸಲ್ಲಿಸುತ್ತಾ ವಿನಯದಿಂದ ಕೈಜೋಡಿಸಿ...)

ವೆಂಕ : ಗುರುವರ್ಯಾ ! ಇಲ್ಲಿ ನನಗೇನಾದರೂ ಸೇವೆಗೆ ಅವಕಾಶವಿದೆಯೇ ? ಆ ಸತ್ಯಸಂಕಲ್ಪನಾದ ಶ್ರೀಹರಿಯ ಸಂಕಲ್ಪವನ್ನು ಬಲ್ಲ ಸರ್ವಜ್ಞರು ತಾವು.

ರಾಘ : ನನ್ನ ಸ್ವಾಮಿ ಆ ಸೇವಾಭಾಗ್ಯವನ್ನು ನಿನಗೇ ಕರುಣಿಸಿರುವನು ವೆಂಕಣ್ಣಾ! ಲೋಕಕಲ್ಯಾಣಕ್ಕಾಗಿ ಇನ್ನು ಮುಂದೆ ನಾವು ಏಕಾಂತದಲ್ಲಿ ಶ್ರೀಕಾಂತನನ್ನು ಸೇವಿಸಲು ಸಂಕಲ್ಪಿಸಿದ್ದೇವೆ.

ವೆಂಕ : ಗುರುವರ್ಯಾ! ನಮ್ಮನ್ನು ಅನಾಥರನ್ನಾಗಿ ಮಾಡಬೇಡಿ.

ರಾಘ : ವೆಂಕಣ್ಣಾ ನಿನಗೂ, ನನಗೂ, ಈ ಚರಾಚರಾತ್ಮಕವಾದ ಜಗತ್ತಿಗೂ ಆ ನಾರಾಯಣನೇ ನಿಜವಾದ ನಾಥನು; ಅವನನ್ನೇ ನಂಬು. ವೆಂಕಣ್ಣಾ ! ಇಲ್ಲಿಗೆ ದಕ್ಷಿಣದಲ್ಲಿಯ ಹಳ್ಳದದಂಡೆಯಲ್ಲಿರುವ ಕರೀಶಿಲೆಯಿಂದ ಶ್ರೀಹರಿಗೆ ಪೀಠರೂಪವಾದ, ಮಂದಿರರೂಪವಾದ ಬೃಂದಾವನವನ್ನು ಮಾಡಿಸು.

(ವೆಂಕಣ್ಣನು ದಿಗ್ಭ್ರಮೆಯಿಂದ ಕಣ್ಣೀರಿಡುತ್ತಾ...)

ವೆಂಕ : ಗುರುದೇವ ! ಆ ಶಿಲೆ...!!!

ರಾಘ :– ನನ್ನ ರಾಮನ ಪಾದಸ್ಪರ್ಶದಿಂದ ಪಾವನವಾದ ಶಿಲೆ. ವೈಕುಂಠಕ್ಕೆ ಪ್ರತಿರೂಪ.

Rarest Archive

(ವೆಂಕಣ್ಣನು ಗುರುರಾಘವೇಂದ್ರರಿಗೆ ನಮಸ್ಕರಿಸಿ ಹೊರಡುವನು. ರಾಘವೇಂದ್ರರು ಭಗಧ್ಯಾನಮಾಡುತ್ತಾ ಶಿಷ್ಯಸಮೇತರಾಗಿ ಅಲ್ಲಿಂದ ಹೊರಡುವರು.)

## ದೃಶ್ಯ 03

(ರಾಯರು ತೋರಿಸಿದ ಸ್ಥಳದಲ್ಲಿ ಮಂಟಪನಿರ್ಮಾಣದ ಕೆಲಸವು ಭರದಿಂದ ಸಾಗಿದೆ. ಮತ್ತೊಂದು ಕಡೆಯಲ್ಲಿ ಬೃಂದಾವನನಿರ್ಮಾಣದ ಕೆಲಸವು ಸಹ ನಡೆಯುತ್ತಾ ಇದೆ. ದಿವಾನ್ ವೆಂಕಣ್ಣನವರು ಕೆಲಸಗಳನ್ನು ಪರ್ಯವೇಕ್ಷಿಸುತ್ತಿದ್ದಾರೆ. ಭಕ್ತರು ಭಗವನ್ನಾಮಸಂಕೀರ್ತನೆಗಳನ್ನು ಮಾಡುತ್ತಾ ಕೆಲಸಗಳನ್ನು ಮಾಡುತ್ತಿದ್ದಾರೆ. ಮಂಟಪದ ಕೆಳಭಾಗದಲ್ಲಿ ಗುಹೆ; ಅದರಮೇಲೆ ಕಟ್ಟೆ; ಮೇಲೆ 12 ಕಂಭಗಳಿಂದ ಕೂಡಿದ ಮಂಟಪ....)

**ಭಕ್ತರ ಸಮೂಹ :**

**ಅಚ್ಯುತಂ ಕೇಶವಂ ರಾಮ ನಾರಾಯಣಂ**
**ಕೃಷ್ಣ ದಾಮೋದರಂ ವಾಸುದೇವಂ ಹರಿಂ**
**ಶ್ರೀಧರಂ ಮಾಧವಂ ಗೋಪಿಕಾವಲ್ಲಭಂ**
**ಜಾನಕೀನಾಯಕಂ ರಾಮಚಂದ್ರಂ ಭಜೇ**

**ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ।**
**ಹರೇಕೃಷ್ಣ ಹರೇಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ।**

**ರಾಮಹರೇ ಹರೆ ರಾಮ ಹರೆ । ಕೃಷ್ಣ ಹರೇ ಹರೆ ಕೃಷ್ಣ ಹರೇ**
**ರಾಮಹರೇ ಹರೆ ರಾಮ ಹರೆ । ಕೃಷ್ಣ ಹರೇ ಹರೆ ಕೃಷ್ಣ ಹರೇ**

**ಗೋವಿಂದ ಹರಿ ಗೋವಿಂದ । ಕೇಶವ ಕೃಷ್ಣ ಜನಾರ್ದನ**
**ಗೋವಿಂದ ಗೋವಿಂದ ಗೋವಿಂದ ಗೋವಿಂದ**
**ಗೋವಿಂದ ಗೋವಿಂದ ಗೋವಿಂದ**

**ಮತ್ಸ್ಯಾಕೃತಿಧರ ಜಯಗೋವಿಂದ । ಪ್ರೋಚ್ಚಕೂರ್ಮ ಹರಿ ಗೋವಿಂದ**
**ಸ್ವಚ್ಛಸೂಕರರೂಪ ಗೋವಿಂದ । ಕುತ್ಸಿತಹರಸಿಂಹ ಗೋವಿಂದ ॥1॥**

**ಬಲಿಭಂಜನವಟು ಗೋವಿಂದ । ಬಲಭಾರ್ಗವರಾಮ ಗೋವಿಂದ**
**ಶೀಲಶೌರ್ಯರಾಮ ಗೋವಿಂದ । ಬಾಲಕೃಷ್ಣ ಹರಿ ಗೋವಿಂದ ॥2॥**

**ಬುದ್ಧರೂಪಿ ಪ್ರಭು ಗೋವಿಂದ । ಶುದ್ಧಕಲ್ಕಿರೂಪ ಗೋವಿಂದ**
**ಉದ್ಧಾರಕರ್ತಾ ಗೋವಿಂದ । ಶ್ರೀದ ಶ್ರೀನಿವಾಸ ಜಯಗೋವಿಂದ ॥3॥**

Rarest Archive


(ಈ ರೀತಿ ಭಜನೆಮಾಡುತ್ತಿರಲು, ಮಂಟಪದ ನಿರ್ಮಾಣ ಪೂರ್ತಿಯಾಗುವುದು. ಮಂಟಪದ ಮಧ್ಯದಲ್ಲಿ ಕೂರ್ಮಾಸನದಮೇಲೆ ಬೃಂದಾವನದ ಕೆಳಭಾಗವು ಪೂರ್ತಿಯಾಗಿ ಜೋಡಿಸಲ್ಪಟ್ಟಿದೆ.)

## ದೃಶ್ಯ 04

(ರಾಘವೇಂದ್ರತೀರ್ಥರು ಪೂಜೆಗೆ ಕುಳಿತಿದ್ದಾರೆ. ಬಹುದೊಡ್ಡ ಬೆಳ್ಳಿಯ ತಟ್ಟೆಯ ತುಂಬಾ 714 ಸಾಲಿಗ್ರಾಮಗಳು ಇವೆ. ಮಂಟಪದಲ್ಲಿ ಒಂದು ಪೀಠ. ಅದರ ಮೇಲೆ ಎರಡು ಬೆಳ್ಳಿಯ ದೊಡ್ಡ ಸಂಪುಷ್ಟಗಳು. ರಾಯರ ಮುಂದೆ ಮತ್ತೊಂದು ಪೀಠ. ಅದರ ಮೇಲೆ ಬೆಳ್ಳಿಯ ತಟ್ಟೆಯಲ್ಲಿ ಎರಡು ತಂಬಿಗೆಗಳು, ಶಂಖ, ಒಂದು ಚಿಕ್ಕ ತಟ್ಟೆ, ಅದರಲ್ಲಿ ಐದು ಬಟ್ಟಲುಗಳು, ಪಕ್ಕದಲ್ಲಿ ಮತ್ತೊಂದು ತಟ್ಟೆ, ಅದರಲ್ಲಿ ಗಂಧ–ಅಕ್ಷತೆ–ತುಳಸಿಗಳಿವೆ. ಎರಡು ದೀಪಸ್ತಂಭಗಳು; ಮಂಗಳಾರತಿತಟ್ಟೆ; ಮಂಗಳಾರತಿ ಬತ್ತಿಗಳು; ಘಂಟೆ. ಒಂದು ಬುಟ್ಟಿಯಲ್ಲಿ ಹೂವುಗಳು. ರಾಘವೇಂದ್ರರು ಕಲಶಪೂಜಾದಿಗಳನ್ನು ಮಾಡಿ, ಶಾಲಗ್ರಾಮಗಳಿಗೆ ಷೋಡಶೋಪಚಾರಪೂಜೆಗಳನ್ನು ನಿರ್ವಹಿಸುವರು, ಸುತ್ತಲೂ ನೆರೆದ ಶಿಷ್ಯರು ಮಂತ್ರಗಳನ್ನು ಪಠಿಸುವರು.

Rarest Archiver

# ಹರಿಗೆ ಮಂದಿರವಾದ ಶಿಲೆ



ರಾಘವೇಂದ್ರಾಂತರ್ಗತ
ಭಾರತೀರಮಣಮುಖ್ಯಪ್ರಾಣಾಂತರ್ಗತ
ಹಯಗ್ರೀವ–ನರಸಿಂಹ–ರಾಮ–ವೇದವ್ಯಾಸ–ಕೃಷ್ಣಾಭಿನ್ನ
ಶ್ರೀ ಶ್ರೀನಿವಾಸಾರ್ಪಣಮಸ್ತು
ಕೃಷ್ಣಾರ್ಪಣಮಸ್ತು

Rarest Archive

# ಸ್ತೋತ್ರ

ಪಾರಂ ಪರಂ ವಿಷ್ಣುರನಂತಪಾರಃ ಪರಃಪರಾಣಾಂ ಅಪಿ ಪಾರಪಾರಃ ।
ಸಬ್ರಹ್ಮಪಾರಃ ಪರಪಾರಭೂತಃ ಪರಃಪರೇಭ್ಯಃ ಪರಮಾರ್ಥರೂಪೀ ॥
ಸಕಾರಣಾಂ ಕಾರಣತಸ್ತತೋಪಿ ತಸ್ಯಾಪಿಹೇತುಃ ಪರಹೇತುಹೇತುಃ ।
ಕಾರ್ಯೇಷು ಚೈವಂ ಸ ಹಿ ಕರ್ಮ ಕರ್ತೃ ರೂಪೈರಶೇಷೈಃ ಅವತೀಹ ಸರ್ವಂ॥
ಬ್ರಹ್ಮಪ್ರಭುಃ ಬ್ರಹ್ಮ ಸ ಸರ್ವಭೂತೋ ಬ್ರಹ್ಮಪ್ರಜಾನಾಂ ಪತಿರಚ್ಯುತೋಸೌ ।
ಬ್ರಹ್ಮಾವ್ಯಯಂ ನಿತ್ಯಮಜಂ ಸ ವಿಷ್ಣುರಪಕ್ಷಯಾದ್ಯೈರಖಿಲೈರಸಂಗೀ ॥
ಬ್ರಹ್ಮಾಕ್ಷರಮಜಂ ನಿತ್ಯಂ ಯಥಾ ಸೌ ಪುರುಷೋತ್ತಮಃ ।
ತಥಾ ರಾಗಾದಯೋ ದೋಷಾಃ ಪ್ರಯಾಂತು ಪ್ರಶಮಂ ಮಮ ।

ಆಯತಾಭ್ಯಾಂ ವಿಶಾಲಾಭ್ಯಾಂ ಶೀತಲಾಭ್ಯಾಂ ಕೃಪಾನಿದೆ ।
ಕರುಣಾರಸಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ ॥
ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣ ಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥

# ಕಲಶ ಪೂಜಾ

ಆ ಕಲಶೇಷು ಧಾವತಿ ಪವಿತ್ರೇ ಪರಿಷಿಚ್ಯತೇ ಉಕ್ಥೈರ್ಯಜ್ಞೇಷು ವರ್ಧತೇ
(ಕಲಶಗಳಲ್ಲಿ ತುಲಸೀದಳಗಳನ್ನು ಹಾಕುವರು)

ಕಲಶಸ್ಯಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ
ಮೂಲೇ ತತ್ರ ಸ್ಥಿತೋ ಬ್ರಹ್ಮ ಮಧ್ಯೇ ಮಾತೃಗಣಾಃ ಸ್ಮೃತಾಃ
ಕುಕ್ಷೌ ತು ಸಾಗರಾಃ ಸರ್ವೇ ಸಪ್ತದ್ವೀಪಾವಸುಂಧರಾ
ಋಗ್ವೇದೋ ಅಥ ಯಜುರ್ವೇದೋ ಸಾಮವೇದೋ ಅಥರ್ವಣಃ
ಅಂಗೈಶ್ಚ ಸಹಿತಾಃ ಸರ್ವೇ ಕಲಶಂತು ಸಮಾಶ್ರಿತಾಃ
ಗಂಗೇ ಚ ಯಮುನೇಚೈವ ಗೋದಾವರಿ ಸರಸ್ವತಿ
ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು.

# ಶಂಖ ಪೂಜಾ

**ಪಾಂಚಜನ್ಯಾಯ ವಿದ್ಮಹೆ ಪಾವಮಾನಾಯ ಧೀಮಹಿ**
**ತನ್ನಃ ಶಂಖಃ ಪ್ರಚೋದಯಾತ್ ।**

Rarest Archiver

ರಾಘವೇಂದ್ರತೀರ್ಥರು ಶಂಖದಿಂದ ಶಾಲಗ್ರಾಮಗಳಿಗೆ ಅಭಿಷೇಕ ಮಾಡುವರು.

**ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್**
**ಸಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠತ್ ದಶಾಂಗುಲಂ**

ಶಾಲಗ್ರಾಮಗಳಿಗೆ ವಸ್ತ್ರಸಮರ್ಪಿಸುವರು, ತುಳಿಸೀದಳಗಳನ್ನು ಹಾಕುವರು.

**ನಾರಾಯಣಯ ವಿದ್ಮಹೇ ವಾಸುದೇವಾಯ ಧೀಮಹಿ**
**ತನ್ನೋ ವಿಷ್ಣುಃ ಪ್ರಚೋದಯಾತ್ । ವಸ್ತ್ರಂ ಸಮರ್ಪಯಾಮಿ ।**

ಶಾಲಗ್ರಾಮಗಳಿಗೆ ಆಭರಣಗಳನ್ನು ತೊಡಿಸುವರು

**ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ**
**ತನ್ನೋ ವಿಷ್ಣುಃ ಪ್ರಚೋದಯಾತ್ । ಆಭರಣಾನಿ ಸಮರ್ಪಯಾಮಿ ।**

ಶಾಲಗ್ರಾಮಗಳಿಗೆ ಗಂಧವನ್ನು ಸಮರ್ಪಿಸುವರು.

**ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ**
**ತನ್ನೋ ವಿಷ್ಣುಃ ಪ್ರಚೋದಯಾತ್ । ಗಂಧಂ ಸಮರ್ಪಯಾಮಿ ।**

ಕೇಶವಾದಿ ಮತ್ತು ಮತ್ಸ್ಯಾದಿ ನಾಮಗಳನ್ನು ಹೇಳುತ್ತಾ ತುಳಸೀ ಮತ್ತು ಪುಷ್ಪಗಳನ್ನು ಸಮರ್ಪಿಸುವರು.

**ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ**
**ತನ್ನೋ ವಿಷ್ಣುಃ ಪ್ರಚೋದಯಾತ್ । ಪುಷ್ಪಾಣಿ ಸಮರ್ಪಯಾಮಿ ।**

**ಕೇಶವಾಯ ನಮಃ । ನಾರಾಯಣಾಯ ನಮಃ । ಮಾಧವಾಯ ನಮಃ ।**
**ಮತ್ಸ್ಯಾಯ ನಮಃ । ಕೂರ್ಮಾಯ ನಮಃ । ವರಾಹಾಯ ನಮಃ ।**

ರಾಘವೇಂದ್ರತೀರ್ಥರು ಶಂಖದಿಂದ ಶಾಲಗ್ರಾಮಗಳಿಗೆ ಹಣ್ಣುಹಾಲುಗಳನ್ನು ಸಮರ್ಪಿಸಿ, ಮಹಾಮಂಗಳಾರತಿಯನ್ನು ಮಾಡುವರು.

**ಮಂಗಳಂ ಭಗವಾನ್ವಿಷ್ಣುಃ ಮಂಗಳಂ ಮಧುಸೂದನಃ**
**ಮಂಗಳಂ ದೇವಕೀಪುತ್ರೋ ಮಂಗಳಂ ಗರುಡಧ್ವಜಃ**

ತುಳಸಿ, ಹೂವು-ಮಂತ್ರಾಕ್ಷತೆಗಳನ್ನು ಸಮರ್ಪಿಸುವರು.

**ರಾಜಾಧಿರಾಯಯ ಪ್ರಸಹ್ಯ ಸಾಹಿನೇ ನಮೋ ವಯಂ ವೈಶ್ರವಣಾಯ**
**ಕುರ್ಮಹೇ । ಸಮೇ ಕಾಮಾನ್ ಕಾಮ ಕಾಮಾಯ ಮಹ್ಯಂ ।**

Rarest Archiver

**ಕಾಮೇಶ್ವರೋ ವೈಶ್ರವಣೋ ದಧಾತು । ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ**

ರಾಘವೇಂದ್ರ ತೀರ್ಥರು ದೇವರನ್ನು ಪ್ರಾರ್ಥಿಸಿ ನಮಸ್ಕರಿಸುತ್ತಾ, ಹೂವು ಅಕ್ಷತೆಗಳನ್ನು ಭಕ್ತಿಯಿಂದ ಅರ್ಪಿಸಿ ಒಂದು ಕೀರ್ತನೆಯನ್ನು ಹಾಡುತ್ತಾರೆ.


**ಇಂದು ಎನಗೆ ಗೋವಿಂದ ನಿನ್ನಯ**
**ಪಾದಾರವಿಂದವ ತೋರೋ ಮುಕುಂದ ಇಂದಿರಾರಮಣ ॥ಪ॥**

**ಸುಂದರವದನನೆ ನಂದಗೋಪನ ಕಂದ**
**ಮಂದರೋದ್ಧರ ಅರವಿಂದಲೋಚನ ಈಗ ॥ಅ.ಪ॥**

**ಮೂಢತನದಿ ಬಲು ಹೇಡಿಜೀವನನಾಗಿ**
**ಧೃಡಬಕುತಿಯನ್ನು ಮಾಡಲಿಲ್ಲವೋ ಹರಿಯೇ॥**
**ನೋಡಲಿಲ್ಲವೋ ನಿನ್ನ ಪಾಡಲಿಲ್ಲವೋ ಮಹಿಮೆ ।**
**ಗಾಡಿಕಾರಕೃಷ್ಣ ಬೇಡಿಕೊಂಬನೋ ಈಗ ॥1॥**

**ಧಾರುಣಿಯೊಳು ಬಲುಭಾರಜೀವನನಾಗಿ**
**ಮೇರೆತಪ್ಪಿ ನಡೆದೆ ಸೇರಿದೆ ಕುಜನರ ॥**
**ಆರು ಕಾಯುವರಿಲ್ಲ ಸಾರಿದೆ ನಿನಗಯ್ಯ ।**
**ಧೀರವೇಣುಗೋಪಾಲ ಪಾರುಗಾಣಿಸೋ ಹರಿಯೇ ॥ 3॥**

Rarest Archiver



ಸ್ವತಃ ಗುರುರಾಜರು ತಮ್ಮ ಅಮೃತಹಸ್ತದಿಂದ ಬೃಂದಾವನದ ಮಧ್ಯಭಾಗದಲ್ಲಿ ಸ್ಥಾಪಿಸಿದ, 713 ಸಾಲಿಗ್ರಾಮಗಳಿಂದ ಕೂಡಿದ ಎರಡುಬೆಳ್ಳಿಯ ಸಂಪುಷ್ಟಗಳು.

ಭೇರಿನಾದಗಳಾಗುತ್ತಿವೆ. ಮತ್ತೊಂದು ಕಡೆಯಲ್ಲಿ ಮಂಗಳವಾದ್ಯಗಳಾಗುತ್ತಿವೆ. ವಿಪ್ರಶ್ರೇಷ್ಠರು ವೇದಘೋಷ ಮಾಡುತ್ತಿದ್ದಾರೆ. ರಾಘವೇಂದ್ರರು ಎದ್ದು, ಶಾಲಿಗ್ರಾಮಗಳನ್ನಿಟ್ಟ ಎರಡುಬೆಳ್ಳಿಯ ಸಂಪುಷ್ಟಗಳನ್ನು ಒಂದೊಂದಾಗಿ ತಲೆಯಮೇಲೆ ಹೊತ್ತು ಬೃಂದಾವನದ ಬಳಿಗೆ ಬಂದು, ಬೃಂದಾವನದ ಮಧ್ಯದಲ್ಲಿ ಸಂಪುಷ್ಟಗಳನ್ನಿಟ್ಟು ನಮಸ್ಕರಿಸುತ್ತಾರೆ.

ವಿಪ್ರರು – **ಶನ್ನೋಮಿತ್ರಸ್ಯಂ ವರುಣಃ । ಶನ್ನೋ ಬೃಹಸ್ಪತಿಃ । ಶನ್ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು । ಓಂ ಶಾಂತಿಃ ಶಾಂತಿಃ ಶಾಂತಿಃ ।**

Rarest Archiver

ಗುರುರಾಜರು ವೆಂಕಣ್ಣನಿಗೆ ಬೃಂದಾವನದ ಮೇಲ್ಭಾಗವನ್ನು ಪೂರ್ಣವಾಗಿ ನಿರ್ಮಿಸಲು ಆದೇಶಿಸುವರು. ವಿಪ್ರರು ಆನಂದಿಂದ ಭಗವನ್ನಾಮಸಂಕೀರ್ತನೆ ಮಾಡುತ್ತಾ, ಸಂಪುಷ್ಟಗಳಿಟ್ಟ ಸ್ಥಳವನ್ನು ಉಳಿದ ಬೃಂದಾವನದ ಭಾಗಗಳಿಂದ ಮುಚ್ಚುವರು. ನಂತರ ಬೃಂದಾವನಕ್ಕೆ ಕಣ್ಣುಗಳನ್ನಿಟ್ಟು ನಾಮಗಳನ್ನು ಹಚ್ಚುವರು. ಎಲ್ಲರೂ ಆ ಭವ್ಯಬೃಂದಾವನವನ್ನು ಕಂಡು ಆನಂದಪರವಶರಾಗುತ್ತಾರೆ. ಎಲ್ಲರ ಕಣ್ಣುಗಳಲ್ಲೂ ಆನಂದಾಶ್ರುಗಳು. ಸಾವಿರಸಾವಿರಜನರು ಸೇರಿದ್ದಾರೆ. ಗುರುರಾಜರು ಬೃಂದಾವನದ ಮುಂದೆ ನಿಂತು ಎಲ್ಲರನ್ನೂ ಆಶೀರ್ವದಿಸುತ್ತಾ ಉಪದೇಶದ ಮಾತುಗಳನ್ನು ಹೇಳುತ್ತಾರೆ.

**ರಾಘ: – ಭಗದ್ಭಕ್ತರೇ ! ನಿಮ್ಮೆಲ್ಲರಿಗೂ ಅನಂತಕಲ್ಯಾಣಗುಣಪೂರ್ಣನಾದ, ಕರುಣಾಮಯನಾದ ಶ್ರೀರಾಮಚಂದ್ರನು, ತನ್ನ ಉಪಾಸನೆಗೆ ಉಪಯುಕ್ತವಾಗುವ ರೀತಿಯಲ್ಲಿ ಆಯುರಾರೋಗ್ಯಐಶ್ವರ್ಯಗಳನ್ನು ಕರುಣಿಸಲಿ ಎಂದು ಮನಸಾರ ಪ್ರಾರ್ಥಿಸುತ್ತೇನೆ.**


**ಪರಮಪವಿತ್ರವಾದ ಭಾರತಾವ್ರನಿಯಲ್ಲಿ ಹುಟ್ಟಿದ ನಿಮಗೆ ರಾಮನೇ ಆದರ್ಶಮೂರ್ತಿ. ನಮ್ಮ ನಡೆನುಡಿಗಳು, ನಮ್ಮ ನಮ್ಮ ಯೋಗ್ಯತೆಗೆ ತಕ್ಕಂತೆ, ಆ ಆದರ್ಶಪುರುಷನ ನಡೆನುಡಿಗಳಂತಾಗಬೇಕು. ಜಗದ್ಗುರುಗೀತಾಚಾರ್ಯನ ನುಡಿಗಳೇ ನಮ್ಮೆಲ್ಲರ ಉಸಿರಾಗಬೇಕು. ಮಾನವಜನ್ಮ ದೊಡ್ಡದು. ಇದ ಹಾನಿ ಮಾಡಲು ಬೇಡಿ. ಕರೆ ಕರೆದಲ್ಲಿಗೆ ಬರುವ ಆ ಕರುಣಾಮೂರ್ತಿಶ್ರೀನಿವಾಸ ನಾವು ಮರೆತರೂ, ಅವನು ನಮ್ಮನು ಮರೆಯುವುದಿಲ್ಲ.**

**ಯಾರನ್ನೂ ದ್ವೇಷಿಸಬೇಡಿರಿ, ನಿಮ್ಮೆಲ್ಲರ ಹೃದಯಗಳು ಪ್ರೇಮಮಯವಾಗಲಿ, ಅಂತರ್ಯಾಮಿಶ್ರೀಹರಿಯ ದರ್ಶನಭಾಗ್ಯವು ನಿಮಗಾಗಲಿ. ಸಮಶಬ್ದವಾಚ್ಯನಾದ, ಸರ್ವಾಂತರ್ಯಾಮಿಯಾದ, ಸರ್ವೇಶನನ್ನು ಸರ್ವತ್ರ ಕಾಣುತ್ತಾ, ಸುಖಪೂರ್ಣರಾಗಿರಿ, ಧರ್ಮಕ್ಕೆ ಜಯವಾಗಲಿ. ಸತ್ಯವು ಸದಾ ಬೆಳಗಲಿ.**

**ಸ್ವಸ್ತಿಃ ಮಾನುಷೇಭ್ಯಃ**

**ಸರ್ವೇಪಿ ಸುಖಿನಃ ಸಂತು ಸರ್ವೇ ಸಂತು ನಿರಾಮಯಾಃ**
**ಸರ್ವೇ ಭದ್ರಾಣಿ ಪಶ್ಯಂತು ಸರ್ವೇ ಸುಕೃತಶಾಲಿನಃ**
**ಜಯ ಜಯ ಶ್ರೀರಘುರಾಮ ಜಯ ಜಯ ಸೀತಾರಾಮ ॥**
**ಜಯಜಯ ಶ್ರೀ ರಘುರಾಮ ಜಯಜಯ ಸೀತಾರಾಮ ।**
**ಜಯ ಜಯ ಭಜಕರ ಭಯಹರ ತ್ವತ್ಪದ ದಯದಲಿ ತೋರಿಸೊ ರಾಮ ॥**
**ಜೈ ಶ್ರೀರಾಮ । ಜೈ ಶ್ರೀರಾಮ । ಜೈ ಶ್ರೀರಾಮ ।**

Rarest Archiver



ದಿವಾನ್ ವೆಂಕಣ್ಣ ಗುರುರಾಘವೇಂದ್ರರ ಆಜ್ಞೆಯ ಮೇರೆಗೆ ಮಂಟಪವನ್ನು ಕಟ್ಟಿಸಿದ. ಮಂಟಪದ ಕೆಳಭಾಗದಲ್ಲಿ ಗುಹೆ. ಇಲ್ಲೇ ರಾಯರು ಕುಳಿತದ್ದು. ಮಂಟಪದಲ್ಲಿ ಒಟ್ಟು 12 ಕಂಬಗಳಿವೆ. ಮಂಟಪದ ಮಧ್ಯದಲ್ಲಿರುವುದೇ ಹರಿಮಂದಿರವಾಗಿ ಗುರುರಾಜರಿಂದ ಚಿಂತಿಸಲ್ಪಟ್ಟ ಬೃಂದಾವನ. ಕಣ್ಣುಗಳಿರುವ ಸ್ಥಳದಲ್ಲಿ ಗುರುರಾಜರು 713 ಲಕ್ಷ್ಮೀನಾರಾಯಣಸಾಲಿಗ್ರಾಮಗಳನ್ನು, ಒಂದು ಮಂಡಲಪರ್ಯಂತರ (48 ದಿನಗಳು) ಪೂಜಿಸಿ, ಶ್ರಾವಣ ದ್ವಿತೀಯಾದಿನದಂದು ಸ್ವಹಸ್ತದಿಂದ ಇಟ್ಟರು. ನಂತರ ತಾವು ಮಂಟಪದ ಎಡಭಾಗದಲ್ಲಿ ಕೆಳಗಡೆ ಇರುವ ದ್ವಾರದ ದ್ವಾರಾ, ಗುಹೆಯನ್ನು ಪ್ರವೇಶಿಸಿ ಬೃಂದಾವನದ ಕೆಳಭಾಗದಲ್ಲಿ ಕುಳಿತರು. ನಂತರ ಗುರುಗಳ ಆಜ್ಞೆಯ ಪ್ರಕಾರ ವೆಂಕಣ್ಣ ಗುಹಾದ್ವಾರವನ್ನು ಬಂಡೆಯಿಂದ ಮುಚ್ಚಿಸಿದ. ಪ್ರಸ್ತುತ ಬೃಂದಾವನಕ್ಕೆ (ಹರಿಮಂದಿರಕ್ಕೆ) ಅಭಿಷೇಕ ಮಾಡಿದ ಪವಿತ್ರತೀರ್ಥ, ಮಂಟಪದ ಎಡಭಾಗದಲ್ಲಿರುವ ತೊಟ್ಟಿಯಲ್ಲಿ ಬಂದು ಬೀಳುತ್ತದೆ. ಈ ತೀರ್ಥ 713 ಸಾಲಿಗ್ರಾಮಗಳಿಗೆ ಅಭಿಷೇಕ ಮಾಡಿದ ತೀರ್ಥ. ಗಂಗಾದಿಸಕಲತೀರ್ಥಗಳಿಗೆ ಮಿಗಿಲಾದುದು. ಇದರ ಪಾನ ಮುಕ್ತಿಗೆ ಸೋಪಾನ.

Rarest Archiver

**ಪ್ರಭೋ ಶ್ರೀನಿವಾಸ । ಪ್ರಭೋ ಶ್ರೀನಿವಾಸ । ಪ್ರಭೋ ಶ್ರೀನಿವಾಸ ।**

ಎಲ್ಲರು ಗುರುರಾಜರು ಹೇಳಿದಂತೆ ಭಜನೆ ಮಾಡುವರು. ಜೈ ಶ್ರೀರಾಮ ಎಂದು ಗಟ್ಟಿಯಾಗಿ ಉಚ್ಚರಿಸುವರು. ರಾಘವೇಂದ್ರರು, ನಿಧಾನವಾಗಿ ನಡೆಯುತ್ತಾ ಬೃಂದಾವನದ ಎಡಭಾಗದಲ್ಲಿ ಕಟ್ಟೆಯ ಕೆಳಗಿರುವ ಗುಹಾದಲ್ಲಿ ಪ್ರವೇಶಿಸುವರು. ಶಿಷ್ಯರು ದುಃಖತಪ್ತರಾಗಿ ರಾಘವೇಂದ್ರರ ಆದೇಶದಂತೆ ಗುಹಾದ್ವಾರಕ್ಕೆ ಬಂಡೆಯನ್ನು ಮುಚ್ಚುವರು. ಇದ್ದಕ್ಕಿದ್ದಂತೆ ಬೃಂದಾವನದ ಮುಂದಿರುವ ದೀಪಗಳು ಪ್ರಜ್ವಲಿಸುವುವು. ಮಂಗಳವಾದ್ಯಗಳು ಮೊಳಗುವವು. ಶಂಖನಾದವಾಗುವುದು. ಆಕಾಶದಿಂದ ಬೃಂದಾವನದ ಮೇಲೆ ಪುಷ್ಪವೃಷ್ಟಿಯಾಗುವುದು. ಹಿನ್ನಲೆಯಲ್ಲಿ ಜಯಕಾರದ ಪದ್ಯವು ಕೇಳಿಸುವುದು.

**ಜಯತು ಜಯ ಗುರುರಾಜ ಶುಭತಮ**
**ಜಯತು ಕವಿಜನಗೇಯಸುಂದರ**
**ಜಯತು ನಿಜಜನಜಾಲಪಾಲಕ ಜಯತು ಕರುಣಾಳೋ ।**
**ಜಯತು ಸಜ್ಜನವಿಜಯದಾಯಕ**
**ಜಯತು ಕುಜನಾರಣ್ಯಪಾವಕ**
**ಜಯತು ಜಯ ಜಯ ದ್ವಿಜವರಾರ್ಚಿತಪಾದಪಂಕೇಜ ॥**

**ಶ್ರೀರಾಘವೇಂದ್ರಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ**
**ಶ್ರೀರಾಮಚಂದ್ರಾಭಿನ್ನ ಶ್ರೀಕೃಷ್ಣಾರ್ಪಣಮಸ್ತು ॥**

Rarest Archiver